SRI K. H. SRINIVAS.—I have issued strict instructions to the effect that till they hear from us, no disconnection should be done so far as I.P. sets are concerned for non-payment etc., If they have discontinued, they shall be re-connected.

Budget Estimates for 1978–79
Demands for Grants

Demand Nos. 11 and 25—Debate Continued.

† ಶ್ರೀ ಕೆ. ಎಚ್ ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ವಾರ್ತಾ ಇಲಾಖೆ, ಯುವಜನ ಸೇವಾ ಇಲಾಖೆ, ಮತ್ತಿತರ ಸಂಬಂಧಪಟ್ಟ ಇಲಾಖೆಗಳ ಕುರಿತು ಸಾಕಷ್ಟು ಸುದೀರ್ಘವಾಗಿ ಚರ್ಚೆಯಾಗಿದೆ. ಚರ್ಚೆ ಬಹಳ ಉನ್ನತ ಮಟ್ಟದಲ್ಲಿ ನಡೆದದ್ದು ಒಂದು ವೈಶಿಷ್ಟ್ಯ. ವಿಶೇಷವಾಗಿ ಈ ಸದನಕ್ಕೆ ನೂತನವಾಗಿ ಆಯ್ಕೆಯಾಗಿ ಬಂದಿರುವ ತರುಣ ಮಿತ್ರರನೇಕರು ಚರ್ಚೆಯಲ್ಲಿ ಪಾಲ್ಗೊಂಡಿದ್ದಾರೆ. ಇವರಲ್ಲಿ ಕೆಲವರು ಈ ಸದನದಲ್ಲಿ ಪ್ರಥಮ ಭಾರಿಗೆ ಭಾಷಣ ಮಾಡಿದರೂ ಸಹ ಗಂಭೀರವಾದ ರೀತಿಯಲ್ಲಿ ಬಹಳ ಉಪಯುಕ್ತವಾದ ವಿಚಾರಗಳನ್ನು ಸಾಕಷ್ಟು ಅಧ್ಯಯನ ಮಾಡಿ ಪ್ರಸ್ತಾಪಿಸಿರುವುದು ನನಗೆ ಬಹಳ ಸಂತೋಷ ಹಾಗೂ ಹೆಮ್ಮೆಯನ್ನುಂಟು ಮಾಡಿದೆ. ಅಲ್ಲದೆ, ಈ ಸದನದಲ್ಲಿ ಅನೇಕ ಜನ ಕ್ರೀಡಾಪಟುಗಳಿದ್ದಾರೆ; ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಕ್ರೀಡಾ ಕ್ಷೇತ್ರದಲ್ಲಿ ಸಾಕಷ್ಟು ಮಾನ್ಯತೆ ಪಡೆದಂಥ ಸದಸ್ಯರುಗಳು ಆ ಕಡೆಯಲ್ಲಿ ಮತ್ತು ಈ ಕಡೆಯಲ್ಲಿ ಇದ್ದಾರೆಂದು ತಿಳಿದು ನನಗೆ ಇನ್ನೂ ಹೆಚ್ಚು ಸಂತೋಷವಾಯಿತು.

ಇವರುಗಳು ಚರ್ಚೆ ಕಾಲದಲ್ಲಿ ಅನೇಕ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇಲಾಖೆ ಕೆಲಸ ಮಾಡಿರತಕ್ಕ ರೀತಿ ನೀತಿ, ಮತ್ತು ಅದರಲ್ಲಿರುವ ಲೋಪದೋಷಗಳನ್ನು ಟೀಕೆ ಟಿಪ್ಪಣಿಗಳೊಂದಿಗೆ ಮಾಡಿದ ಎಲ್ಲ ಮಾನ್ಯ ಸದಸ್ಯರ ಭಾಷಣವನ್ನು ನಾನು ಬಹಳ ಶ್ರದ್ಧೆಯಿಂದ ಹಾಗೂ ವಿನಯಪೂರ್ವಕವಾಗಿ ಕೇಳಿದ್ದೇನೆ; ಮತ್ತು ಅವರ ಭಾವನೆಗಳನ್ನು ಹೆಚ್ಚಿನ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದೇನೆ. ಮಾನ್ಯ ಸ್ನೇಹಿತ ಸದಸ್ಯ ಶ್ರೀ ಬಾಚೇಗೌಡ ಅವರು ಮಾತನಾಡುತ್ತಾ, ನಾನು ಆಟ–ಗೀಟ ಆಡಿದ್ದೇನೆಯೋ, ನನಗೆ ಕ್ರೀಡೆಗಳಲ್ಲಿ ಆಸಕ್ತಿ ಇದೆಯೋ ಇಲ್ಲವೋ ಎಂದು ಕೇಳಿದರು. ಮಾನ್ಯ ಗೆಳೆಯ ಶ್ರೀ ಎಂ. ಶ್ರೀನಿವಾಸ್ ಅವರು, ನಾನು ಅವರೊಂದಿಗೆ ಟೆನಿಸ್ ಆಡುತ್ತಿದ್ದುದನ್ನು ಪ್ರಸ್ತಾಪ ಮಾಡಿದ್ದರಿಂದ, ನನಗೆ ಟೆನ್ನಿಸ್ ಆಟವಂತೂ ಆಡಲಿಕ್ಕೆ ಬರುತ್ತದೆಂದು ಅವರು ಭಾವಿಸಬಹುದು.

SRI A. LAKSHMISAGAR.—There is a saying that he has played many a game.

ಶ್ರೀ ಕೆ. ಎಚ್. ಶ್ರೀನಿವಾಸ.—ಇದಕ್ಕೆ ಆಂಗ್ಲ ಭಾಷೆಯಲ್ಲಿ ಒಂದು ಮಾತಿದೆ. ಅದೇನೆಂದರೆ : "Jack of all but master of none." ಅಂದರೆ, ಎಲ್ಲದರಲ್ಲೂ ಸಾಕಷ್ಟು ಪರಿಶ್ರಮವಿದೆ ; ಆದರೆ ಯಾವುದರಲ್ಲೂ ಹೇಳಿಕೊಳ್ಳುವಷ್ಟು ಪ್ರಾವೀಣ್ಯತೆ ಇಲ್ಲ ಎಂದು ಈ ಮಾತು ನನಗೂ ಅನ್ವಯಿಸುತ್ತದೆ ಎಂದು ನಾನು ಅವರ ಗಮನಕ್ಕೆ ತರಬಯಸುತ್ತೇನೆ. ಇದರ ಅರ್ಥ ಎಲ್ಲ ಆಟಗಳಲ್ಲೂ ನಾನು ಕೈಯಿಟ್ಟು ಬಿಟ್ಟೆ ಎಂದಲ್ಲ. ಅವುಗಳನ್ನು ಆಡಿದ್ದೇನೆ; ಆದರೆ ಇಪ್ಪತ್ನಾಲ್ಕು ತಾಸೂ ಆಡಿ ಪ್ರಾವೀಣ್ಯತೆ ಪಡೆದಿರುವಷ್ಟು ಪಡೆದಿಲ್ಲದಿರಬಹುದು

ಶ್ರೀ ಎಸ್. ಆರ್. ಬೊಮ್ಮಾಯಿ.—ಅಂದರೆ ಎಲ್ಲಾ ಆಟದಲ್ಲೂ ಚೆಲ್ಲಾಟವಾಡಿದ್ದೀರಿ ;

ಶ್ರೀ ಕೆ. ಎಚ್ ಶ್ರೀನಿವಾಸ್.—ಅಂತಹವರಿಗೆ ಸವಾಲು ಬಿಡ್ಡಿ ಒಂದು ಸಲವಾದರೂ ಆಟದಲ್ಲಿ ಅವರನ್ನು ಸೋಲಿಸಿ ನಂತರ ಆಡುವುದನ್ನು ಬಿಟ್ಟಿದ್ದೇನೆ. ಈಗ ರಾಜಕೀಯ ಪ್ರವೇಶ ಮಾಡಿರುವುದರಿಂದ ಬೇರೆ ಆಟಗಳನ್ನು–ನಮಗೂ ಆಡುವುದಕ್ಕಾಗುವುದಿಲ್ಲ; ನಿಮಗೂ ಆಡುವುದಕ್ಕಾಗುವುದಿಲ್ಲ.

ಮಾನ್ಯ ಮಳ್ಳೂರು ಆನಂದರಾಯರು ಮಾತನಾಡುತ್ತಾ, ನನ್ನ ಕೈಯಲ್ಲಿರುವ ಇಲಾಖೆಯ ಪಟ್ಟಿಯನ್ನು ನೋಡಿಬಿಟ್ಟು, ಇವನ್ನೆಲ್ಲ ಹೇಗೆ ನಿಭಾಯಿಸುತ್ತೀರಿ ಎಂದು ನನ್ನನ್ನು ಕೇಳಿದರು. ಇದು ಸಹಜವಾದ ಪ್ರಶ್ನೆ. ಇಲಾಖಾ ಪಟ್ಟಿಯನ್ನು ನೋಡಿದಾಗ ನನಗೆ ಕೂಡ ಹಾಗೆ ಅನ್ನಿಸಿತು. ನಂತರ

ಈ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೂ ತಿಳಿಸಿದೆ. ನನಗೆ ಕೊಟ್ಟಿದ್ದು ಬಹಳ ಕಡಮೆಯಾಯಿತು ಎಂದೇನೂ ಹೇಳಲಿಲ್ಲ. ಆದರೆ, ಇಷ್ಟೆಲ್ಲಾ ಇಲಾಖೆ ಪಟ್ಟಿಯನ್ನು ತೋರಿಸಿ, ಆಯ್ಕೆಯನ್ನು ನನಗೇ ಬಿಟ್ಟಿದ್ದರೆ, ಇದರಲ್ಲಿ ಯಾವುದಾದರೊಂದು ಇಲಾಖೆಯನ್ನು ಆರಿಸಿಕೊಳ್ಳುತ್ತಿದ್ದೆ ಎಂದು ತಿಳಿಸಿದೆ.

೨–೦೦ ಪಿ. ಎಂ.

ಆದರೆ ಈ ನಂತರ ಎಲ್ಲಾ ಇಲಾಖೆಗಳಿಗೂ ಕೂಡ ಅದಕ್ಕೆ ತಕ್ಕಷ್ಟು ನನ್ನ ಗಮನ ಪೂರೈಕೆಯಾಗುವ ರೀತಿಯಲ್ಲಿ ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದ್ದೇನೆ. ಯಾವುದೇ ಒಂದು ಲೋಪ ಸಾಧ್ಯವಾದಷ್ಟು ಆಗದ ರೀತಿಯಲ್ಲಿ ನೋಡಿಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಬಯಸುತ್ತೇನೆ. ಒಂದು ದೃಷ್ಟಿಯಿಂದ ಎಲ್ಲಾ ಇಲಾಖೆಗಳೂ ಇದ್ದರೂ ಕೂಡ ನನ್ನ ಕರ್ತವ್ಯವನ್ನು ನಿರ್ವಹಿಸುವುದು ಬಹಳ ಸುಲಭ. ಏಕೆಂದರೆ ನಾನು ಏನು ಮಾಡಿದರೂ ಅದು ಮಂತ್ರಿಗಳ ಕರ್ತವ್ಯ ಮಾಡಿದಂತಾಗುತ್ತದೆ. ನಾನು ಬೆಳಿಗ್ಗೆ ಪತ್ರಿಕೆಯನ್ನು ಓದುತ್ತೇನೆ. ಅದು ನನ್ನ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳ ಕೆಲಸವನ್ನು ಮಾಡಿದಂತಾಗುತ್ತದೆ. ಮಧ್ಯಾಹ್ನ ಎಲ್ಲಿಗಾದರೂ ಯಾವುದಾದರೂ ಮ್ಯಾಚ್ ನೋಡುವುದಕ್ಕೆ ಹೋದರೆ ಅಥವಾ ತುರ್ತಾಗಿ ಸಿನಿಮಾ ನೋಡುವುದಕ್ಕೆ ಹೋದರೂ ಕೂಡ ಮಂತ್ರಿಗಳ ಕೆಲಸವನ್ನು ಮಾಡುತ್ತೇನೆ ಎಂದು ಹೇಳಬಹುದು. ಆದ್ದರಿಂದ ಒಂದು ದೃಷ್ಟಿಯಿಂದ ನಾನು ಮುಖ್ಯ ಮಂತ್ರಿಗಳಿಗೆ ಕೃತಜ್ಞನಾಗಬೇಕಾಗಿದೆ. ಏತಕ್ಕೆಂದರೆ ನನ್ನ ಇಲಾಖೆಯ ಕರ್ತವ್ಯವನ್ನು ನಿರ್ವಹಿಸುವುದು ಬಹಳ ಸುಲಭ. ಇನ್ನೊಂದು ದೃಷ್ಟಿಯಿಂದ ಬಹಳ ಜಟಿಲವಾದದ್ದು. ಏತಕ್ಕೆಂದರೆ ಒಂದು ಕಡೆ ನನ್ನ ಇಲಾಖೆಗೆ ಕೊಟ್ಟಿರುವ ಹಣ ಬಹಳ ಕಡಿಮೆ. ಇನ್ನೊಂದು ಕಡೆ ನಿರ್ಜೀವವಾದ ವಸ್ತುಗಳಲ್ಲಿ ಮರ ಕಟ್ಟಡಗಳು ಇವು ಹೇಳಿದ ಹಾಗೆ ಕೇಳುತ್ತವೆ. ಆದರೆ ನನಗೆ ಸಂಬಂಧಪಟ್ಟವರು ಎಂದರೆ ಬಹಳ ಸೂಕ್ಷ್ಮಮತಿಯುಳ್ಳವರಾಗಿರತಕ್ಕ ಯುವ ಜನರು ಮತ್ತು, ಪತ್ರಿಕಾಕರ್ತರು ಸಾಹಿತಿಗಳು ಹಾಗೂ ಕಲಾವಿದರು. ಅವರಲ್ಲಿ ನಾನು ಒಂದು ಮಾತು ಆಡಿದರೆ ಹೆಚ್ಚಾಗುತ್ತದೆ ಒಂದು ಮಾತನ್ನಾಡಿದರೆ ಕಡಿಮೆಯಾಗುತ್ತದೆ. ಏನೇನೋ ಸೆಮಿನಾರ್ ನಡೆಯುತ್ತವೆ. ಆದ್ದರಿಂದ ತಾಳ್ಮೆಯಿಂದ ನಾನು ವ್ಯವಹರಿಸಬೇಕಾದಂತಹ ಗುರುತರವಾದ ಜವಾಬ್ದಾರಿ ಇದೆ ಎನ್ನತಕ್ಕ ದೃಷ್ಟಿಯಿಂದ ನಿಜವಾಗಿಯೂ ಕೂಡ ನನ್ನ ಜವಾಬ್ದಾರಿ ಬಹಳ ಗಂಭೀರವಾಗಿ ಪರಿಗಣಿಸುವಂಥಾದ್ದು.

ಇನ್ನು ಈ ಬೇಡಿಕೆಯ ಮೇಲೆ ನಡೆದಂತಹ ಚರ್ಚೆಯಲ್ಲಿ ಸಾರ್ವತ್ರಿಕ ಸ್ವರೂಪದ ವಿಷಯಗಳನ್ನು ಅನೇಕ ಮಾನ್ಯಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅವುಗಳಿಗೆ ನಾನು ಉತ್ತರ ಕೊಡುವುದಕ್ಕೆ ಮುಂಚೆ ಚರ್ಚೆಯ ಕಾಲದಲ್ಲಿ ಮೂಡಿ ಬಂದಂತಹ ಕೆಲವೊಂದು ನಿರ್ದಿಷ್ಟವಾದ ಟೀಕೆಗಳು ಹಾಗೂ ಸಲಹೆಗಳ ಬಗ್ಗೆ ಸಂಕ್ಷೇಪವಾಗಿ ಮೊಟ್ಟಮೊದಲು ನಾನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಈ ಚರ್ಚೆಯನ್ನು ಪ್ರಾರಂಭ ಮಾಡಿದಂತಹ ಮಾನ್ಯ ಮಿತ್ರರಾದ ಶ್ರೀನಿವಾಸ್ ಅವರು ಅನೇಕ ಪ್ರಶ್ನೆಗಳನ್ನು ಎತ್ತಿದ್ದಾರೆ. ಅವರು ಮೊಟ್ಟಮೊದಲನೆಯದಾಗಿ ಡಿಪಾರ್ಟ್‌ಮೆಂಟಿನ ಒಂದು ವರದಿಯನ್ನೇನು ಕೊಟ್ಟಿದ್ದಾರೆ, ಅದರಲ್ಲಿ ವಿವರಗಳನ್ನೇನು ಕೊಟ್ಟಿದ್ದಾರೆ ಅದು ಸಾಲದು ಎಂದು ಹೇಳಿದ್ದಾರೆ. ಬರುವಂತಹ ವರ್ಷದಲ್ಲಿ ಅಗತ್ಯವಿರತಕ್ಕ ವಿಷಯಗಳನ್ನು ಪೂರೈಕೆ ಮಾಡುವುದಕ್ಕೆ ನಿರ್ದೇಶನ ಕೊಡುತ್ತೇನೆ. ನಂತರ ಮಂಡ್ಯಾ ಷುಗರ್ ಫ್ಯಾಕ್ಟರಿಯ ವೆಲ್‌ಫೇರ್ ಫಂಡಿನಿಂದ ಮಂಡ್ಯಾ ಜಿಲ್ಲೆಯಲ್ಲಿರತಕ್ಕ ಯುವಜನ ಸಂಘಗಳು ಹಣವನ್ನು ಪಡೆದುಕೊಂಡಿರತಕ್ಕ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಹಣವನ್ನು ಹೇಗೆ ಖರ್ಚು ಮಾಡಿದ್ದಾರೆ ಎಂದು ಕೇಳಿದ್ದಾರೆ. ನಾನು ತಮಗೆ ಹೇಳುವುದಾದರೆ ನಮ್ಮ ಖಾತೆಗೆ ಸಂಬಂಧಪಟ್ಟಹಾಗೆ ಏನು ಗ್ರಾಂಟ್ ಕೊಡುತ್ತೇವೆ ಅದು ಸರಿಯಾಗಿ ಉಪಯೋಗವಾಗಿದೆಯೋ ಇಲ್ಲವೇ ಎಂಬುದನ್ನು ನಾವು ನೋಡುತ್ತೇವೆ. ಈಗ ಮಾನ್ಯ ಸದಸ್ಯರು ಹೇಳಿದ ಮಂಡ್ಯಾ ಯುವಕ ಸಂಘದವರು ಇತರ ಸಂಪನ್ಮೂಲಗಳಿಂದ ಗ್ರಾಂಟ್ ಪಡೆದುಕೊಂಡಿದ್ದರೆ ಅದನ್ನು ಹೇಗೆ ಉಪಯೋಗ ಮಾಡಿದ್ದಾರೆ ಎನ್ನುವ ವಿವರಗಳು ಇಲ್ಲಿ ಇಲ್ಲ. ನಿರ್ದಿಷ್ಟವಾಗಿ ಅವರು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರೆ ಅದರ ಬಗ್ಗೆ ಅಗತ್ಯ ತನಿಖೆ ನಡೆಸುತ್ತೇವೆ. ಅದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದ್ದರೆ ಆ ಪ್ರಯತ್ನವನ್ನೂ ಕೂಡ ನಾವು ಮಾಡುತ್ತೇವೆ.

ಹಾಗೇನೇ ಸ್ಟೇಡಿಯಂಗೆ ಕೊಡತಕ್ಕ ಗ್ರಾಂಟು ೫ ಲಕ್ಷ ರೂಪಾಯಿಗಳು. ಬೇರೆ ಸಂಪನ್ಮೂಲಗಳಿಂದ ರೂಢಿಸತಕ್ಕ ಫಂಡ್ ಸಾಕಷ್ಟು ಮೊತ್ತದ ಗ್ರಾಂಟ್ ಆಗುತ್ತದೆ. ಇನ್ನೂ ಹೆಚ್ಚಿನ ಹಣ ಲಭ್ಯ

ಆದರೆ ಹೆಚ್ಚಿನ ಗ್ರಾಂಟ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮೈಸೂರು ಸ್ಟೇಡಿಯಂನ ವಿಚಾರವನ್ನು ನಾನು ಈಗಾಗಲೇ ಹೇಳಿದ್ದೇನೆ. ಮೈಸೂರಿನಲ್ಲಿ ಒಂದು ಅತ್ಯುತ್ತಮವಾದ ಕ್ರೀಡಾಂಗಣವನ್ನು ನಿರ್ಮಾಣ ಮಾಡಬೇಕು, ಎನ್ನುವ ಒಂದು ಆಸಕ್ತಿ, ಒಂದು ಅಭಿಮಾನ ನನಗೆ ಇದೆ. ಏತಕ್ಕೆಂದರೆ ಈಗಾಗಲೇ ನಿರ್ಧಾರವಾಗಿದೆ. ಚಾಮುಂಡಿ ವಿಹಾರದ ಹತ್ತಿರ ಇರತಕ್ಕ ವಿಸ್ತಾರವಾದ ಭೂಮಿಯಲ್ಲಿ ಅದನ್ನು ಮಾಡಬೇಕು ಎನ್ನುವ ತೀರ್ಮಾನ ಆಗಿದೆ. ಆ ಭೂಮಿಯನ್ನು ದೊರಕಿಸಿಕೊಳ್ಳುವ ಬಗ್ಗೆ ಕೆಲವು ತೊಂದರೆಗಳು ಇವೆ. ಆ ಭೂಮಿಯಲ್ಲಿ ಕೆಲವು ಭಾಗ ನಗರಸಭೆಯ ಆಸ್ತಿಯ ಮಿತಿಯ ಕಾಯಿದೆಯ ಅನ್ವಯ ಹೆಚ್ಚುವರಿ ಭೂಮಿಯನ್ನು ಪಡೆದುಕೊಳ್ಳಬೇಕು. ಇನ್ನು ಕೆಲವು ಭಾಗವನ್ನು ಅಕ್ವೈರ್ ಮಾಡಿಕೊಳ್ಳಬೇಕು ಇದರಿಂದ ಆ ಕೆಲಸ ನಿಧಾನವಾಗಿದೆ. ಕಳೆದ ತಿಂಗಳಿನಲ್ಲಿ ನಾನು ಮೈಸೂರಿಗೆ ಹೋಗಿದ್ದಾಗ ಸಂಬಂಧಪಟ್ಟ ಸಮಿತಿ, ಪುರಸಭೆ ಅಧಿಕಾರವರ್ಗದವರ ಜೊತೆಯಲ್ಲಿ ಇದು ಬಗ್ಗೆ ಸಾಕಷ್ಟು ಚರ್ಚೆ ಮಾಡಿ ಅದನ್ನು ತೀವ್ರ ಗತಿಯಲ್ಲಿ ಕಾರ್ಯಕ್ರಮ ಕೈಗೊಳ್ಳುವುದಕೆ ಸೂಚನೆಯನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಗಮನ ಕೊಡುತ್ತೇವೆ ಎಂದು ಈ ಸಂದರ್ಭದಲ್ಲಿ ನಾನು ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಬೆಂಗಳೂರು ಕ್ರಿಕೆಟ್ ಸ್ಟೇಡಿಯಂ ಮತ್ತು ಟೆನಿಸ್ ಕೋರ್ಟುಗಳಿಗೆ ೨೦–೩೦ ಲಕ್ಷ ರೂಪಾಯಿಗಳ ಗ್ರಾಂಟ್ ಕೊಟ್ಟಿದೆ. ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಸೆಂಟ್ರಲ್ ಮ್ಯಾಚಿಂಗ್ ಕಾಂಟ್ರಿಬ್ಯೂಷನ್ ಇಲ್ಲದೆ ಹುಬ್ಬಳ್ಳಿಯನ್ನು ಬಿಟ್ಟರೆ ಉಳಿದ ಕಡೆಗಳಲ್ಲಿ ಸ್ಟೇಡಿಯಂ ಬಂದಿಲ್ಲ. ಮ್ಯಾಚಿಂಗ್ ಗ್ರಾಂಟ್ ಬಾರದೆ ಇರುವುದರಿಂದ ಅದು ನಿಂತು ಹೋಗಿದೆ. ಆದ್ದರಿಂದ ಬೆಂಗಳೂರಿನಲ್ಲಿ ಸ್ಟೇಡಿಯಂ ಮಾಡುವುದಕ್ಕೆ ಯಾವರೀತಿ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆ ಅದೇ ರೀತಿ ಡಿಸ್ಟ್ರಿಕ್ಟ್‌ಗಳಲ್ಲಿಯೂ ಹಣ ಸಹಾಯ ಮಾಡಬೇಕು ಎಂದು ನಾನು ಮನವಿ ಮಾಡುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಇದಕ್ಕೆ ನಾವು ಬಹುಭಾಗ ಸಾಲದ ರೂಪದಲ್ಲಿ ಕೊಟ್ಟಿದ್ದೇವೆ. ಜಿಲ್ಲೆಗಳಿಗೆ ಔಟ್ ರೇಟ್ ಗ್ರಾಂಟ್ ಕೊಡುತ್ತಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ರಾಯಚೂರಿನಲ್ಲಿ ಸಾರ್ವಜನಿಕರಿಂದ ನಿರೀಕ್ಷೆಗಿಂತ ಹೆಚ್ಚು ಕಂಟ್ರಿಬ್ಯೂಷನ್ ಬಂದಿದೆ. ಕೆಲವು ಕಡೆ ಬೇರೆ ಕಾರಣಗಳಿಂದ ತೊಂದರೆಯಾಗಿದೆ. ಬೇರೆ ಕಡೆಗಳಲ್ಲಿ ಆ ಕೆಲಸ ನಡೆಯದೆ ತೊಂದರೆ ಬಂದಿದ್ದರೆ ಅದರ ಬಗ್ಗೆ ವಿಶೇಷವಾದ ಗಮನ ಕೊಡುತ್ತೇವೆ. ಸ್ಪೋರ್ಟ್ಸ್ ಕೌನ್ಸಿಲ್ ಬಿಳಿ ಆನೆ ಅಲ್ಲ. ಸ್ಪೋರ್ಟ್ಸ್ ಕೌನ್ಸಿಲ್‌ನಲ್ಲಿ ಅದರ ಉಪಾಧ್ಯಕ್ಷರ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದರಲ್ಲಿ ಕನಿಷ್ಟಮಟ್ಟದ ಒಂದು ಸ್ಟಾಫ್ ಇಟ್ಟು ಕೊಂಡಿದ್ದೇವೆ. ಅದರಲ್ಲಿ ಓವರ್ ಹೆಡ್‌ಕಾಸ್ಟ್ ಜಾಸ್ತಿ ಆಗುವುದಿಲ್ಲ. ಉಪಾಧ್ಯಕ್ಷರು ಈ ದೇಶದಲೇ ಅಲ್ಲ ಹೊರದೇಶದಲ್ಲಿ ಯುವಜನ ಚಟುವಟಿಕೆಗಳಲ್ಲಿ ಸಾಕಷ್ಟು ತರಬೇತಿಯನ್ನು ಹೊಂದಿದ್ದಾರೆ. ಅವರನ್ನು ಹೊಸದಾಗಿ ನೇಮಿಸಿಲ್ಲ. ಮೊದಲೇ ಇದ್ದರು. ಈಗ ಅವರ ಸೇವೆಯನ್ನು ಮುಂದುವರಿಸಲಾಗಿದೆ ಸ್ಪೋರ್ಟ್ಸ್ ಕೌನ್ಸಿಲ್ ಯಾವ ರೀತಿಯಲ್ಲಿ ಮಾರ್ಪಾಡು ಮಾಡಬೇಕೋ ಆ ರೀತಿ ಮಾರ್ಪಾಡು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಸ್ಪೋರ್ಟ್ಸ್ ಅಸೋಸಿಯೇಷನ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತು ಸ್ಪೋರ್ಟ್ಸ್ ಕೌನ್ಸಿಲ್ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಸ್ಪೋರ್ಟ್ಸ್ ಕೌನ್ಸಿಲ್‌ನಲ್ಲಿ ಲೇಡೀಸ್ ಕ್ರಿಕೆಟ್ ಅಸೋಸಿಯೇಷನ್‌ನಲ್ಲಿ ೫ ಸಾವಿರ ರೂಪಾಯಿಗಳ ಬಹುಮಾನವನ್ನು ವಿತರಣೆ ಮಾಡಿಲ್ಲ. ಅದಕ್ಕೆ ಕಾರಣ ಇದುವರೆಗೂ ಲೇಡಿಸ್ ಕ್ರಿಕೆಟ್ ಅಸೋಸಿಯೇಷನ್ನಿಗೆ ಸಂಬಂಧಪಟ್ಟ ಹೆಸರುಗಳು ಅವರ ಆಡ್ರಸ್ ಏನು ಎನ್ನುವುದನ್ನು ಇದುವರೆಗೂ ಕೊಟ್ಟಿಲ್ಲ. ಅವರ ಹೆಸರಿನ ಪಟ್ಟಿಯನ್ನು ತರಿಸಿ ಯಾರಿಗೆ ಕೊಡಬೇಕೋ ಅವರಿಗೆ ಅದನ್ನು ವಿತರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಈ ಸಂದರ್ಭದಲ್ಲಿ ಈ ಸದನದ ಮೂಲಕ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಬಗೆ ಸ್ಪಷ್ಟಪಡಿಸುತ್ತೇನೆ. ಈ ಕ್ರೀಡಾ ಸಂಘಗಳಲ್ಲಿ ಸ್ವಲ್ಪ ರಾಜಕೀಯವೂ ನಡೆಯುತ್ತಿದೆ ಎಂದು ಕೆಲವರು ಹೇಳಿದರು. ಯಾರು ಆಟಗಾರರು ಮತ್ತು ಕ್ರೀಡಾಪಟುಗಳು ಇದ್ದಾರೆಯೋ ಅವರ ಹಿತರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯ. ಆದರೆ ಯಾವುದೇ ಅಸೋಸೀಯೇಷನ್ನಿನ ಹಿತರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯ ಅಲ್ಲ. ಯಾವ ಅಸೋಸಿಯೇಷನ್ ಕ್ರೀಡಾಪಟುಗಳ ಹಾಗೂ ಆಟಗಾರರ ಹಿತಕ್ಕೆ ಧಕ್ಕೆ ಬರುವ ರೀತಿಯಲ್ಲಿ ವರ್ತನೆ ಮಾಡುತ್ತಾರೆಯೋ ಅವರ ಬಗ್ಗೆ ಸರ್ಕಾರ ಬಿಗಿಯಾಗಿ ವರ್ತಿಸುವುದು. ಇದೇ ರೀತಿ ಟೇಬಲ್ ಟೆನಿಸ್ ಅಸೋಸಿಯೇಷನ್‌ನವರು ಆಲ್ ಇಂಡಿಯಾ ಟೇಬಲ್ ಟೆನಿಸ್ ಪ್ಲೇಯರ್ ಅನ್ನು

ಡಿಬಾರ್‌ಮಾಡುವುದಕೆ ಹೊರಟಿದ್ದಾರೆ. ನಾನು ಹೇಳಿದೆ ಇದನ್ನು ಇನ್ನು ೨೪ ಗಂಟೆಯೊಳಗೆ ಸರಿಪಡಿಸ ದಿದ್ದರೆ ನಿಮ್ಮ ಮನ್ನಣೆಯನ್ನು ಕಿತ್ತುಹಾಕುತ್ತೇವೆ. ಎಂದು.

ಶ್ರೀ ಎಂ. ಶ್ರೀನಿವಾಸ್.—ಸ್ವಾಮಿ, ಸ್ಪೋರ್ಟ್ಸ್ ಕೌನ್ಸಿಲ್‌ನಲ್ಲಿ ೮ ವರ್ಷಗಳಿಗಿಂತ ಹೆಚ್ಚಿಗೆ ಕಾಲ ಸದಸ್ಯರಾಗಿರಬಾರದೆಂದು ಇದೆ. ಆದರೂ ಕೆಲವರು ಇನ್ನೂ ಇದ್ದಾರೆ. ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದರ ಬಗ್ಗೆ ಕೂಡ ನಾವು ಒಂದು ಕಾನೂನು ಜಾರಿಗೆ ಕೊಡು ತ್ತೇವೆ. ಯಾರು ಇದನ್ನು ಅನುಸರಿಸುವುದಿಲ್ಲ ಅಂಥವರನ್ನು ಅಲ್ಲಿಂದ ಕಿತ್ತುಹಾಕುತ್ತೇವೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅಲ್ಲಿನ ಕ್ರೀಡೆಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಡಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ನಾನು ಹೇಳುವುದಿಷ್ಟೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಲ್ಲಿನ ಕ್ರೀಡೆಗಳಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ನಮಗೂ ಆಸಕ್ತಿ ಇದೆ. ಇದಕ್ಕಾಗಿ ೮–೧೦ ಗ್ರಾಮಗಳನ್ನು ಒಟ್ಟಿಗೆ ಸೇರಿಸಿ ಒಂದು ಯೂತ್ ಸೆಂಟರ್ ಎಂದು ಮಾಡಿ ಅಲ್ಲಿ ಗ್ರಾಮಾಂತರ ಕ್ರೀಡಾ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆಂದು ಉದ್ದೇಶವನ್ನು ಇಟ್ಟು ಕೊಂಡಿದ್ದೇವೆ, ಈ ಆಲೋಚನೆಯನ್ನು ಪರಿಶೀಲನೆ ಮಾಡಿ ಅಲ್ಲಿನ ಕ್ರೀಡೆಗಳಿಗೆ ಹೆಚ್ಚಿನ ಗಮನ ಕೊಡು ತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಫಿಲಂ ಸಬ್ಸಿಡಿ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇದರ ಬಗ್ಗೆ ಮುಂದೆ ನಾನು ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್‌ರವರು ಮುಖ್ಯವಾಗಿ ಕಲಾವಿದ ರಿಗೆ, ವಿಶ್ರಾಂತಿ ವೇತನವನ್ನು ಕೊಟ್ಟಿರುವ ಬಗ್ಗೆ ವಿವರಗಳು ಬೇಕೆಂದು ಕೇಳಿದರು. ಅವರಿಗೆ ನಾನು ಹೇಳಬಯಸುವುದು ಇಷ್ಟೆ. ಸುಮಾರು ೩೪೭ ಜನರಿಗೆ ತಿಂಗಳಿಗೆ ೧೦೦ ರೂಪಾಯಿಗಳ ಪ್ರಕಾರ ಮಾಸಾಶನ ಕೊಡುತ್ತಿದ್ದೇವೆ. ಸುಮಾರು ೧೩೧ ಜನರಿಗೆ ತಿಂಗಳಿಗೆ ೫೦೦ ರೂಪಾಯಿಗಳ ಪ್ರಕಾರ ಮಾಸಾಶನ ಕೊಡುತ್ತಿದ್ದೇವೆ. ಈ ೧೩೧ ಜನರ ಪೈಕಿ ೮ ಜನ ಮೃತರಾಗಿದ್ದಾರೆ. ಇದು ಒಂದು ಅಡ್‌ಹಾಕ್ ರೀತಿಯಲ್ಲಿ ನಡೆದುಕೊಂಡು ಬಂತು. ಇದೆಲ್ಲಾ ಕೊಟ್ಟಮೇಲೆ ಕೆಲವು ಗೈಡ್ ಲೈನ್ಸ್ ಮಾಡಿದ್ದೇವೆ. ಇತ್ತೀಚೆಗೆ ನಮ್ಮ ಹಣಕಾಸಿನ ಇಲಾಖೆಯಲ್ಲಿ ಇದು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಹೆಚ್ಚು ಎಂದರೆ ಒಂದು ವರ್ಷದಲ್ಲಿ ೫ ಜನರ ಪ್ರಕಾರ ಈ ಮಾಸಾಶನ ಕೊಡಬೇಕೆಂದು ಇತ್ತು. ಆದರೆ ಇತ್ತೀಚೆಗೆ ಇದು ಬಹಳ ಜಾಸ್ತಿಯಾಗಿದೆ. ಈಗಾಗಲೇ ಸುಮಾರು ೫೦೦–೬೦೦ ಕಲಾವಿದರ ವಿಶ್ರಾಂತಿ ವೇತನದ ಬಗ್ಗೆ ಅರ್ಜಿಗಳು ಬಂದಿವೆ. ಇದರಲ್ಲಿ ನಾವು ಎಲ್ಲರಿಗೂ ಕೊಡುವುದಕ್ಕಾಗುವುದಿಲ್ಲ. ಇದರಲ್ಲಿ ವಿಶ್ರಾಂತಿ ವೇತನಕ್ಕೆ ಅರ್ಹತೆ ಇರುವವರಿಗೆ ಮಾತ್ರ ನಾವು ಕೊಡಬೇಕಾಗುತ್ತದೆ. ಇತ್ತೀಚೆಗೆ ರಂಗಭೂಮಿ ಕಲಾವಿದರು ನಶಿಸಿ ಹೋಗುವ ಪರಿಸ್ಥಿತಿ ಬಂದಿದೆ, ಮುಂದೆ ಅವರಿಗೆ ಈ ವಿಶ್ರಾಂತಿ ವೇತನವನು ಕೊಡ ಬೇಕೆಂದರೂ ಅವರು ಸಿಕ್ಕುವುದಿಲ್ಲ. ಆದ್ದರಿಂದ ಇವರಿಗೆ ಈ ವೇತನವನ್ನು ಕೊಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೇವೆ. ಒಟ್ಟಿನಲ್ಲಿ ಅರ್ಹತೆ ಇರುವವರಿಗೆ ಈ ವಿಶ್ರಾಂತಿ ವೇತನವನ್ನು ನೀಡಿ ಅನುಕೂಲ ಮಾಡಿಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬೇಲೂರು ದೇವಸ್ಥಾನದ ಬಗ್ಗೆ ಹೇಳುವುದಾದರೆ, ಈ ದೇವಸ್ಥಾನಕ್ಕೆ ಅಪಾಯ ಒದಗಿ ಬಂದಿದೆ. ಆ ದೇವಸ್ಥಾನದ ಪಕ್ಕದಲ್ಲೇ ಇರತಕ್ಕ ಪ್ಲೈವುಡ್ ಫ್ಯಾಕ್ಟರಿಯ ಹೊಗೆಯಿಂದ ದೇವಸ್ಥಾನದ ವಾಸ್ತುಶಿಲ್ಪಕ್ಕೆ ಹಾನಿಯಾಗುತ್ತಿದೆ ಎಂದು ನನಗೆ ತಿಳಿದು ಬಂತು. ಆ ಕೂಡಲೇ ನಾನು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇನೆ. ಅಂದರೆ ಆರ್ಕ್ಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ದವರೂ ಮತ್ತು ನಮ್ಮ ಸರ್ಕಾರದವರೂ ಬೇಲೂರಿನಲ್ಲೇ ಒಂದು ಸಭೆ ಸೇರಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಇದಾದ ನಂತರ ಆ ವಾಸ್ತುಶಿಲ್ಪವನ್ನು ರಚಿಸುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತೇನೆಂದು ಈ ಸಂಗರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಬಾಚೇಗೌಡರು ಮಾತನಾಡುತ್ತಾ ನಾವು ಇವತ್ತು ಎಲ್ಲಾ ಕಡೆಗಳಲ್ಲೂ ಹೋಟೆಲ್‌ಗಳು ಮನೆಗಳನ್ನು ಕಟ್ಟುತ್ತಿದ್ದೇವೆ. ಆದರೆ ಮಕ್ಕಳಿಗೆ ಆಟವಾಡಲು ಜಾಗ ಗಳನ್ನು ಬಿಡುತ್ತಿಲ್ಲ. ಇದೇ ರೀತಿ ನಡೆದುಕೊಂಡು ಹೋದರೆ ಬಹುಶಃ ಇನ್ನು ಕೆಲವೇ ದಿವಸಗಳಲ್ಲಿ

ಮಕ್ಕಳಿಗೆ ಆಟವಾಡುವುದಕ್ಕೆ ಆಟದ ಮೈದಾನವೇ ಇಲ್ಲದೇ ಹೋಗುವ ಪರಿಸ್ಥಿತಿ ಬರಬಹುದೆಂದು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರ ಕಳಕಳಿ ಸಹವಾದುದುದೇ ಆಗಿದೆ. ಈ ರೀತಿಯ ತೊಂದರೆಯನ್ನು ಗಮನಿಸಿ ಇದನ್ನು ತಪ್ಪಿಸುವ ಸಲುವಾಗಿ ಇಷ್ಟರಲ್ಲಿಯೇ ನಾವು ಈ ಸದನದ ಮುಂದೆ "Karnataka Parks Play fields and open spaces preservation and Regulation Bill 1978" ಎಂದು ಒಂದು ಮಸೂದೆಯನ್ನು ಆದಷ್ಟು ಬೇಗ ಈ ಸಭೆಯಲ್ಲಿ ತಂದು ಮುಂದಿನ ಜನಾಂಗಕ್ಕ ಅಗತ್ಯವಾಗಿ ಬೇಕಾದ ಆಟದ ಬಯಲುಗಳನ್ನು ರಕ್ಷಿಸುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ. ಮತ್ತು ಮಾನ್ಯ ಸಭೆಯೂ ಕೂಡ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಸದಸ್ಯರೊಬ್ಬರು ಸರ್ಕಾರದವರು ಬರೀ ಪಾಶ್ಚಿಮಾತ್ಯ ಕ್ರೀಡೆಗಳಿಗೇ ಪ್ರೋತ್ಸಾಹ ಕೊಡುತ್ತಿದ್ದಾರೆಯೇ ಹೊರತು ನಮ್ಮ ದೇಶದ ಕ್ರೀಡೆಗಳಿಗೆ ಪ್ರೋತ್ಸಾಹ ಕೊಡುತ್ತಿಲ್ಲವೆಂದು ಹೇಳಿದರು, ಮಾನ್ಯ ಸದಸ್ಯರಿಗೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಏನೆಂದರೆ ನಾವು ನಮ್ಮ ದೇಶದ ಆಟಪಾಟಗಳಿಗೂ ಸಾಕಷ್ಟು ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಮತ್ತು ಇನ್ನು ಮುಂದೆ ಗ್ರಾಮಾಂತರ ಪ್ರದೇಶದ ಕ್ರೀಡೆಗಳಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಜೀವರಾಜ್ ಆಳ್ವರವರು ಮಾತನಾಡುತ್ತಾ ಯೂತ್ ಸರ್ವೀಸಸ್‌ಗೆ ಒಬ್ಬ ಫುಲ್ ಫ್ಲೆಜ್ಡ್ ಕ್ಯಾಬಿನೆಟ್ ಮಂತ್ರಿ ಇರಬೇಕೆಂದು ಹೇಳಿದರು. ಇದು ಒಪ್ಪತಕ್ಕ ವಿಷಯ ಮತ್ತು ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಅವರು ಒಂದು ಸಾಂಸ್ಕೃತಿಕ ತಂಡವನ್ನು ೧೯೭೭ರಲ್ಲಿ ಗಡಿ ಪ್ರದೇಶಕ್ಕೆ ತೆಗೆದುಕೊಂಡು ಹೋದಾಗ ಆದ ತೊಂದರೆಗಳನ್ನು ಇಲ್ಲಿ ತಿಳಿಸಿದರು ನಾನು ಆ ಸಂದರ್ಭದಲ್ಲಿ ಇಲ್ಲಿ ಇರಲಿಲ್ಲವಾದರೂ ಅವರು ಪಟ್ಟ ತೊಂದರೆಗಳಿಗಾಗಿ ನಾನು ವಿಷಾಧಿಸುತ್ತೇನೆ. ಆದರೆ ನನ್ನ ಕಾಲದಲ್ಲಿ ಇಂಥ ತೊಂದರೆಯಾಗುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ ಎನ್ನುವ ಭರವಸೆಯನ್ನೂ ಕೂಡ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ತೆಕ್ಕೇಡ್‌ರವರು ಮಾತನಾಡುತ್ತಾ, ದೇಶದಲ್ಲಿ ಗರಡಿ ಮನೆಗಳನ್ನು ಪುನರುಜ್ಜೀವನ ಮಾಡಬೇಕೆಂದು ಹೇಳಿದರು. ಈ ಕಾರ್ಯಕ್ಕಾಗಿ ಸುಮಾರು ೧ ಲಕ್ಷ ರೂಪಾಯಿ ಗ್ರಾಂಟನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಇದೆಲ್ಲಕ್ಕಿಂತಲೂ ಹೆಚ್ಚಿಗೆ ಮಾನ್ಯ ಮುಖ್ಯ ಮಂತ್ರಿಯವರಿಗೇ ಈ ವಿಷಯದಲ್ಲಿ ಬಹಳ ಆಸಕ್ತಿ ಇದೆ. ಮತ್ತೊಂದು ವಿಷಯ ಹೇಳುವುದಾದರೆ ಈ ಗರಡಿಯಲ್ಲಿ ಯಾರ್ಯಾರಿಗೆ ಹೆಚ್ಚು ಆಸಕ್ತಿ ಇರುತ್ತದೆ ಅಂಥವರಿಗ ಒಳ್ಳೆಯ ಪೌಷ್ಠಿಕಾಹಾರವನ್ನೂ ಒದಗಿಸುವ ಯೋಚನೆಯನ್ನು ಮಾಡುತ್ತಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಶಾಸಕರಿಗೂ ಗರಡಿ ವಿದ್ಯೆ ಕಲಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಏಕೆಂದರೆ ಮಾನ್ಯ ದೇವರಾಜ ಅರಸ್‌ರವರೇ ಪೈಲ್ವಾನರಾಗಿದ್ದಾರೆ.

ಶ್ರೀ ಕೆ. ಹೆಚ್ ಶ್ರೀನಿವಾಸ್.—ದೇವರಾಜ ಅರಸ್‌ರವರ ಕುಸ್ತಿ ಪಟ್ಟು ಬಹಳ ವಿಶಿಷ್ಠವಾದುದು. ಅವರು ಹಾಕುವ ಪಟ್ಟನ್ನು ನಾವು ನೋಡಬಹುದೇ ಹೊರತು ಕಲಿಯುವುದಕ್ಕಾಗುವುದಿಲ್ಲ.

ನಾನು ಹೇಳಿದ್ದುದು, ನನ್ನ ಶಿಷ್ಯವೃತ್ತಿಯಲ್ಲಿ ಕಂಡುಕೊಂಡಿದ್ದು ಎಂದರೆ ಅವರ ಕುಸ್ತಿಯನ್ನು ನಾವು ನೋಡುವುದಕ್ಕೆ ಚಂದ. ನಮಗೆ ಕಲಿಯುವುದಕ್ಕೆ ಬಹಳ ಕಷ್ಟ ಎಂದು.

ಇನ್ನು ಮಾನ್ಯ ಮಳ್ಳೂರು ಆನಂದರಾವ್ ಅವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಪ್ರಾಮುಖ್ಯವಾಗಿ ಹೇಳಿರುವುದು ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ. ಜಾಹೀರಾತುಗಳನ್ನು ಕೊಡುವ ಬಗ್ಗೆ ಸರ್ಕಾರದವರು ಏನಾದರೂ ನೀತಿಯನ್ನು ಇಟ್ಟುಕೊಂಡಿದ್ದಾರೆಯೇ ಎಂದು ಹೇಳಿದ್ದಾರೆ. ಇಟ್ಟುಕೊಂಡಿದ್ದೇವೆ. ಈ ವರ್ಷದಲ್ಲಿಯೂ ಕೂಡ ಒಂದು ಗೈಡ್‌ಲೈನ್ಸ್‌ನ್ನು ನಾವು ಇಟ್ಟುಕೊಂಡು ಅದರ ಪ್ರಕಾರ ನಾವು ಕೆಲಸ ಮಾಡುತ್ತಿದ್ದೇವೆ. If the circulation of a newspaper is more than 10,000 during the previous 3 months, it will be considered for media list. ಸರ್ಕ್ಯುಲೇಷನ್, ಹೇಗೆ, ಎಷ್ಟು ಇರಬೇಕು, ಹೇಗೆ ಅವುಗಳ ಅಳತೆ ಇರಬೇಕು, ಎಂದು ಅದಕ್ಕೆ ಒಂದು ನಿರ್ಧಿಷ್ಟವಾದಂಥ ಒಂದು ಅಳತೆಯನ್ನು ನಾವು ಇಟ್ಟುಕೊಂಡಿ

ದ್ದೇವೆ. ಕೆಲವು ಪತ್ರಿಕೆಗಳಿಗೆ ಹೇಗೆ ಕೆಲವು ವರ್ಷದಲ್ಲಿ ಜಾಹೀರಾತು ಹೆಚ್ಚಾಗಿದೆ ಎನ್ನುವುದನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಕೆಲವು ಪತ್ರಿಕೆಗಳಿಗೆ ಇದು ಆಗಿದೆ, ನಿಜ. ಇದಕ್ಕೆ ಕಾರಣವೂ ಕೂಡ ಇದೆ. ಕ್ಲಾಸಿ ಫೈಡ್ ಆಡ್ ರ್ಟೈಸ್‌ಮೆಂಟ್ ನಾವು ಏನು ಕೊಡುತ್ತೇವೆ. ಅಂದರೆ ಟೆಂಡರ್ ನೋಟಿಫಿಕೇಷನ್ಸ್, ಇತ್ಯಾದಿಗಳು, ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟದ್ದು, ಮತ್ತು ಅವುಗಳ ಕಾರ್ಯನಿರ್ವಹಣೆಗೆ ಸಂಬಂಧಪಟ್ಟ ಜಾಹೀರಾತುಗಳು. ಇವುಗಳನ್ನು ಆಯಾ ಡಿಪಾರ್ಟ್‌ಮೆಂಟ್, ಯಾವ ಭಾಗದಲ್ಲಿ ಕೆಲಸ ಕಾರ್ಯಗಳು ಇದ್ದಾವೆ. ಯಾವ ಪತ್ರಿಕೆಗಳು ಅಲ್ಲಿ ಸರ್ಕ್ಯುಲೇಟ್ ಆಗುತ್ತಿವೆ ಅಂಥ ಪತ್ರಿಕೆಗಳಿಗೆ ಮಾತ್ರ ಕೊಡಬೇಕು ಎಂದು ನಿಯಮಗಳನ್ನು ಇಟ್ಟುಕೊಂಡುಬಿಟ್ಟು ಅಲ್ಲಿಗೆ ಮಾತ್ರ ಜಾಹೀರಾತುಗಳನ್ನು ನಾವು ಕಳುಹಿಸಿಕೊಡುತ್ತೇವೆ. ಹೀಗೆ ಇದು ಇರುವುದರಿಂದ ಒಂದು ವರ್ಷದಿಂದ ಇನ್ನೊಂದು ವರ್ಷಕ್ಕೆ ಇದು ಹೆಚ್ಚು ಕಡಿಮೆಯಾಗುತ್ತಾ ಹೋಗುತ್ತದೆ. ಮಾನ್ಯ ಸದಸ್ಯರು ಸಂಯುಕ್ತ ಕರ್ನಾಟಕ ಪತ್ರಿಕೆಗೆ ಒಂದು ವರ್ಷ ಹೆಚ್ಚು ಜಾಸ್ತಿ ಜಾಹೀರಾತು ಹೋಯಿತು ಎಂದು ಹೇಳಿದರು. ಹುಬ್ಬಳ್ಳಿ ಎಡಿಷನ್‌ಗೆ ಜಾಸ್ತಿ ಅಡ್ವರ್‌ಟೈಸ್‌ಮೆಂಟ್ ಹೋಗಿದೆ, ಕಾರಣ, ಕೃಷ್ಣ ಮೇಲ್ದಂಡೆಯ ಟೆಂಡರ್ ನೋಟಿಫಿಕೇಷನ್ಸ್ ಇತ್ಯಾದಿಗಳು ಅಲ್ಲಿ ಜಾಸ್ತಿಯಾಗಿ ಬಂದಿದ್ದರಿಂದ ಆ ವರ್ಷ ಅದಕ್ಕೆ ಜಾಸ್ತಿ ಕೊಡಬೇಕಾಯಿತು. ಮತ್ತೆ ಪ್ರಜಾಮತಕ್ಕೆ ಇದ್ದಕ್ಕಿದ್ದ ಹಾಗೆ ಜಾಹೀರಾತು ಜಾಸ್ತಿಯಾಯಿತು ಎಂದು ಹೇಳಿದರು. ಇದಕ್ಕೂ ಸಹ ಸರ್ಕಾರದ ವತಿಯಿಂದ ಒಂದು ಸಪ್ಲಿಮೆಂಟ್ ಮಾಡುವುದಕ್ಕೋಸ್ಕರ ಇಷ್ಟು ಜಾಸ್ತಿಯಾಗಿದೆ. ಏಕೆಂದರೆ, ಅವರ ಹತ್ತಿರ ಒಂದು ಬಣ್ಣದ ಮುದ್ರಣದ ಕೆಲಸ ನಡೆಯುತ್ತದೆ. ನಾಲ್ಕು ಪೇಜ್ ಸಪ್ಲಿಮೆಂಟ್‌ಗೆ ಅವರಿಗೆ ಸಹಾಯ ಮಾಡಿದರು, ಇದರಿಂದ ಅವರಿಗೆ ಸ್ವಲ್ಪ ಜಾಸ್ತಿಯಾಗಿದೆ. ಒಮ್ಮೊಮ್ಮೆ ಈ ರೀತಿಯಾಗಿ ಹೆಚ್ಚು ಕಡಿಮೆ ಆಗುತ್ತಿರುತ್ತದೆ. ಆದಷ್ಟೂ ನಾವು ಒಂದು ನೀತಿಯನ್ನು ಇಟ್ಟುಕೊಂಡು ಅದಕ್ಕೆ ಲೋಪ ಬಾರದ ರೀತಿಯಲ್ಲಿ ಈ ಕೆಲಸವನ್ನು ನಿರ್ವಹಿಸುವುದಕ್ಕೆ ಪ್ರಯತ್ನ ಪಡುತ್ತೇವೆ.

ಜ್ವಾಲಾಮುಖಿಗೆ ಎರಡು ವರ್ಷಗಳ ಹಿಂದೆ ಕೊಟ್ಟಿರತಕ್ಕದ್ದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಇದನ್ನು ಕೇಳಿ ತಿಳಿದುಕೊಂಡಿರುವ ರೀತಿಯಲ್ಲಿ, ಈಗಾಗಲೇ ಈ ವಿಷಯ ಸದನದಲ್ಲಿ ಚರ್ಚೆಯಾಗಿ ಸಂಬಂಧಪಟ್ಟ ಸಚಿವರು ಇದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ನಾನು ಮತ್ತೆ ಪುನಃ ಇದರ ಬಗ್ಗೆ ಹೇಳ ಬೇಕಾದ ಅಗತ್ಯವಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಅವರಿಗೆ ಕೊಟ್ಟಂಥ ೭೮–೧೮ ಸಾವಿರ ರೂಪಾಯಿಗಳನ್ನು ಈ ಗೈಡ್‌ಲೈನ್ಸ್ ಆಧಾರವಾಗಿಟ್ಟುಕೊಂಡು ಕೊಟ್ಟಿದ್ದಾರೆಯೇ ? ಸರ್ಕಾರ ಆಜ್ಞೆ ಮಾಡುವಾಗ ತಮ್ಮ ಗೈಡ್‌ಲೈನ್ಸ್‌ಗೆ ಲೋಪ ಭಾರದ ರೀತಿಯಲ್ಲಿ ಮಾಡಬೇಕು, ಇದು ಅವರ ಜವಾಬ್ದಾರಿಯಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೆ ನಾವು ಹೇಳುವುದು ತಮಗೆ ಮುಖ್ಯಮಂತ್ರಿಗಳ ಪಟ್ಟು ಅರ್ಥವಾಗಿಲ್ಲ ಎಂದು. ಅವರ ಪಟ್ಟುಗಳಲ್ಲಿ ಇದೂ ಒಂದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಜಾಹೀರಾತುಗಳಲ್ಲಿ ಸ್ವಲ್ಪಲೋಪವಾಗಿದೆ ಎಂದು ತಾವು ಒಪ್ಪು ವುದಾದರೆ ಇದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿ, ೧೯೭೫ ರಿಂದ ಇಲ್ಲಿಯವರೆಗೆ ಏನೇನು ಜಾಹೀರಾತುಗಳನ್ನು ಕೊಟ್ಟಿದ್ದಾರೆ, ಅವುಗಳಲ್ಲಿ ಏನು ವ್ಯತ್ಯಾಸವಾಗಿದೆ ಎಂದು ತನಿಖೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದಕ್ಕೆ ತನಿಖಾ ಸಮಿತಿಯ ಅಗತ್ಯವಿಲ್ಲ. ಡಿಪಾರ್ಟಮೆಂಟಿಗೆ ಸಂಬಂಧಪಟ್ಟಂತೆ, ಶಾಸಕರ ಸಲಹಾ ಸಮಿತಿಯನ್ನು ಸದ್ಯದಲ್ಲಿಯೇ ಮಾಡುತ್ತೇವೆ. ಇದನ್ನು ನಮ್ಮ ಸಲಹಾ ಸಮಿತಿಯಲ್ಲಿ ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆ. ಯಾವರೀತಿಯಲ್ಲಿಯೂ ಲೋಪ ದೋಷಗಳು ಇವೆಂದು ಕಂಡುಬಂದಲ್ಲಿ ಅವುಗಳನ್ನು ಸರಿಮಾಡುವುದಕ್ಕೆ ಅಗತ್ಯವಾದ ಎಲ್ಲಾ ಕ್ರಮ ಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ಪತ್ರಿಕೆಗಳಿಗೆ ಜಾಹೀರಾತು ಕೊಡುವ ಬಗ್ಗೆ ಗೈಡ್‌ಲೈನ್ಸ್ ಇರಬೇಕು, ಇದೆಯೋ ಅಥವಾ ಇಲ್ಲವೇ ? ಇದ್ದರೆ, ನಿಯಮಗಳನ್ನು ಉಲ್ಲಂಘಿಸಿ ಜಾಹೀರಾತು ಕೊಡಲಿಕ್ಕೆ ಕಾರಣ ಏನು ?

ಶ್ರೀ ಕೆ.ಹೆಚ್.ಶ್ರೀನಿವಾಸ್.—ಆಯಾ ಇಲಾಖೆಗೆ ಸಂಬಂಧಪಟ್ಟಂತೆ ನಿಯಮಗಳನ್ನು ಇದರ ಬಗ್ಗೆ ಇಟ್ಟುಕೊಂಡಿದ್ದಾರೆ. ವಿಶೇಷವಾದಂಥ ಸಂದರ್ಭದಲ್ಲಿ ಸರ್ಕಾರದವರು ಆಜ್ಞೆಯನ್ನು ಹೊರಡಿಸಿ ಜಾಹೀರಾತುಗಳನ್ನು ಕೊಡುವುದಕ್ಕೆ ಈ ಗೈಡ್‌ಲೈನ್ಸ್‌ಗಳು ಅಡ್ಡಿ ಬರುವುದಿಲ್ಲ. ಅದು ಯಾವ ಸಂದರ್ಭದಲ್ಲಿ ಆಗಿದೆ ಎಂದು ತಿಳಿದು ಆ ಸಂದರ್ಭದಲ್ಲಿ ಇದನ್ನು ಕೇಳಿದರೆ ಹೇಳಬಹುದೇ ಹೊರತು ಈಗ ಏನು ಹೇಳಿದರೂ ಅದು ಸರಿಯಲ್ಲ.

ಶ್ರೀ ಮಳ್ಳೂರು ಆನಂದರಾವ್.—ಸರ್ಕಾರವನ್ನು ಕೇಳಲಿಕ್ಕೆ ಇದಕ್ಕಿಂತ ಸೂಕ್ತ ಸಮಯ ಸಂದರ್ಭ ಯಾವುದೂ ಇಲ್ಲ. ಏಕೆ ಒಂದೇ ಪತ್ರಿಕೆಗೆ ಇಷ್ಟು ಜಾಹೀರಾತು ಕೊಟ್ಟಿದ್ದೀರಿ ಎಂದು ಕೇಳುವುದಕ್ಕೆ ನಮಗೆ ಅಧಿಕಾರ ಇದೆ. ತಾವು ಉತ್ತರ ಹೇಳಲೇಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾರೋ ಮಾಡಿದ ಪಾಪಕ್ಕೆ ನನ್ನನ್ನು ಏಕೆ ತಲೆ ಹೊಡೆಯುತ್ತೀರಿ ಎಂದು ಹೇಳುತ್ತಿದ್ದೀರಿ ಅಲ್ಲವೇ ?

SRI A. LAKSHMISAGAR.—He is asked to hold the baby of which he is not the author. That is his grievance.

SRI K. H. SRINIVAS.—I am not making any grievance. I am making plain what has happened. ಗೈಡ್‌ಲೈನ್ಸ್ ಇಲ್ಲ ಎಂದಲ್ಲ, ಗೈಡ್‌ಲೈನ್ಸ್‌ಗಳು ಇವೆ. ಬಹುಪಾಲು ಜಾಹೀರಾತುಗಳನ್ನು ಗೈಡ್‌ಲೈನ್ಸ್ ಪ್ರಕಾರ ಕೊಟ್ಟುಕೊಂಡು ಹೋಗುತ್ತೇವೆ. ವಿಶೇಷ ಸಂದರ್ಭದಲಿ ಸರ್ಕಾರ ಆಜ್ಞೆಯನ್ನು ಹೊರಡಿಸಿರಬಹುದು. ಆ ಆಜ್ಞೆಗಳನ್ನು ಇಲ್ಲಿ ಹೇಗೆ ವಿವರಿಸುವುದಕ್ಕೆ ಸಾಧ್ಯ ? ನಾವಾದರೂ ಈ ಗೈಡ್‌ಲೈನ್ಸ್ ಬಿಟ್ಟು ಯಾವ ರೀತಿಯ ವ್ಯತ್ಯಾಸ ಮಾಡುತ್ತಿಲ್ಲ. ಕೆಲವು ಜಾಹೀರಾತುಗಳು ಕೆಲವು ಪತ್ರಿಕೆಗಳಿಗೆ ಜಾಸ್ತಿಯಾಗಿರಬಹುದು. ಪ್ರಜಾಪ್ರಭುತ್ವಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರು ಎಂದು ಹೇಳಿದ್ದಾರೆ. ಅದಕ್ಕೆ ನಾವು ಕೊಟ್ಟಿರುವುದು ಮೂರರು ಸೊನ್ನೆ ಕಡಿಮೆ. ಇನ್ನಾಗುರಲ್ ಇಷ್ಯೂಗೆ ಎಲ್ಲಾ ಪತ್ರಿಕೆಗೆ ಕೊಡುವ ರೀತಿಯಲ್ಲಿ ಟೋಕನ್ ಅಡ್ವರ್‌ಟೈಸ್‌ಮೆಂಟ್ ಎಂದು ೧೦೦ ರೂಪಾಯಿಗಳನ್ನು ಕೊಟ್ಟಿದೆ.

ಶ್ರೀ ಮಳ್ಳೂರು ಆನಂದರಾವ್.—ಗೈಡ್‌ಲೈನ್ಸ್ ಏನೋ ತಾವು ಇಟ್ಟುಕೊಂಡಿದ್ದೀರಿ ಗೈಡ್‌ಲೈನ್ಸ್ ವಿರುದ್ಧವಾಗಿ ಸರ್ಕಾರದವರು ಅಡ್ವರ್‌ಟೈಸ್‌ಮೆಂಟ್ ಕೊಡಿ ಎಂದು ಆಜ್ಞೆ ಮಾಡುವುದಾದರೆ ಇದು ಸರಿಯೇ ?

ಶ್ರೀ ಕೆ. ಹೆಚ್. ಶ್ರೀನಿವಾಸ್, ಸರ್ಕಾರದವರು ಈ ದಿಸೆಯಲ್ಲಿ ಆಜ್ಞೆಯನ್ನು ಹೊರಡಿಸಿದರೆ, ಅದು ಗೈಡ್‌ಲೈನ್ಸ್‌ನ ಅವಿಭಾಜ್ಯ ಅಂಗವಾಗುತ್ತದೆ. ಸರ್ಕಾರ ಹೊರಡಿಸಿರತಕ್ಕ ಆಜ್ಞೆ ವಿಶೇಷ ಸಂದರ್ಭಕ್ಕೆ ಮಾತ್ರ ಎಂದು ನಾವು ಜಸ್ಟಿಫಿಕೇಷನ್ ಮಾಡಬೇಕಾಗುತ್ತದೆ. ಆಗ ಆಗಿರತಕ್ಕ ಆಜ್ಞೆಗಳ ಬಗ್ಗೆ ಈ ಸಮಯದಲ್ಲಿ ನಾವು ಸಮರ್ಥನೆ ಮಾಡಬೇಕಾದ ಅಗತ್ಯವಿಲ್ಲ ಎಂದು ನಾನು ಸಭೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಷಯ ಹಿಂದೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಸಂಬಂಧಪಟ್ಟ ಸಚಿವರು ಇದರ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಮತ್ತೆ ಕೊಡಬೇಕೆಂದರೆ ಅದನ್ನು ಪರಿಶೀಲನೆ ಮಾಡಬಹುದು. ಆದಷ್ಟೂ ನಾವು ಗೈಡ್‌ಲೈನ್ಸ್‌ಗಳನ್ನು ಮೀರದೆ ವ್ಯವಹರಿಸುವುದಕ್ಕೆ ಪ್ರಯತ್ನ ಪಡುತ್ತೇವೆ. ಈಗ ಮಾಡಿರುವುದರಿಂದ, ಅದನ್ನು ಕೇವಲ ವೈಯುಕ್ತಿಕ ರಾಜಕಾರಣಕ್ಕೆ ಬಳಸದೆ ನಿಜವಾಗಿಯೂ ಇದು ಸರ್ಕಾರದ ಹಿತದೃಷ್ಟಿಯಿಂದ ಅಗತ್ಯವಾಯಿತು ಎನ್ನುವುದನ್ನು ನಾನು ಹೇಳುತ್ತೇನೆ.

ಇನ್ನು ಅಡ್‌ವರ್ಟೈಸ್‌ಮೆಂಟ್ ಬಗ್ಗೆ ಹೇಳುತ್ತಾ. ಬೇರೆ ಬೇರೆ ಏನು ಸ್ಟ್ಯಾಟುಟರಿ ಕಾರ್ಪೊರೇಷನ್‌ಗಳಿವೆ ಅಲ್ಲೆಲ್ಲ ಬಹಳ ಅವ್ಯವಹಾರ ನಡೆಯುತ್ತಿದೆ ಎಂದು ಹೇಳಿದಿರಿ. ಅದನ್ನು ನಾನು ಪರಿಶೀಲಿಸುತ್ತೇನೆ ಮತ್ತು ಆ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನಿಸುತ್ತೇನೆ. ಇನ್ನು ಕೆಲವರು ಹೇಳಿದರು, ಹಳದಿ ಪತ್ರಿಕೆಗಳೇನಿವೆ, ಅವಕ್ಕೆ ಹೆಚ್ಚಾಗಿ ಅಡ್‌ವರ್ಟೈಸ್‌ಮೆಂಟ್ ಸಿಕ್ಕುತ್ತದೆ ಎಂದು. ಇವತ್ತು ನಮಗೆ ಬಂದಿರುವ ತೊಂದರೆ ಏನೆಂದರೆ ಸಣ್ಣ ಪತ್ರಿಕೆಗಳಿಗೆ ಸಂಬಂಧಪಟ್ಟ ವ್ಯವಹಾರ ಬಹಳ ಕ್ಲಿಷ್ಟವಾಗಿದೆ. ಯಾವ ಪತ್ರಿಕೆ ಎಷ್ಟರಮಟ್ಟಿಗೆ ಅದರ ಸರ್ಕ್ಯುಲೇಷನ್ ಇದೆ ಅಥವಾ ಅದರ ಗುಣಮಟ್ಟ ಇದೆ ಎಂಬುದನ್ನು ಹೇಳುವುದು ಕಷ್ಟ. ಇವತ್ತಿನ ದಿವಸ ಅವರವರಲ್ಲೇ ಒಗ್ಗಟ್ಟಿಲ್ಲದೆ ಬೇರೆ ಬೇರೆ ಸಂಘಗಳನ್ನು ಮಾಡಿಕೊಂಡಿದ್ದಾರೆ, ಒಬ್ಬರು ಹೇಳಿದ್ದನ್ನು ಇನ್ನೊಬ್ಬರು ಕೇಳುವುದಿಲ್ಲ.

ನೀವು ಕೊಡತಕ್ಕ ಅಡ್ವರ್ಟೈಸ್‌ಮೆಂಟಿನಲ್ಲಿ ೧/೩ ಬಾಗ ಚಾರ್ಟರ್ಡ್ ಅಕೌಂಟೆಂಟಿಗೆ ಫೀಜ್ ಕೊಡುವುದಕ್ಕೆ ಹೊರಟುಹೋಗುವುದರಿಂದ ಬಹಳ ತೊಂದರೆಯಾಗಿದೆ ಎಂದು ಹೇಳಿದರು. ನಾನು ಆ ನಿಯಮಾವಳಿಯನ್ನು ಬದಲಾವಣೆ ಮಾಡಿ, ಚಾರ್ಟರ್ಡ್ ಅಕೌಂಟೆಂಟುಗಳು ಬೇಡ, ನೀವೇ ಸ್ವತಃ ನಿಮ್ಮ ಸರ್ಕ್ಯುಲೇಷನ್ ಎಷ್ಟಿದೆ ಎಂದು ಪ್ರಮಾಣ ಪತ್ರ ಮಾಡಿಕೊಡಿ ಎಂದು ಬದಲಾವಣೆಮಾಡಿದೆ. ನಾವು ಕೂಡ ಒಂದು ವಿಜಿಲೆನ್ಸ್ ಸೆಲ್‌ಮಾಡುತ್ತೇವೆ. ಯಾವುದೇ ಸಂದರ್ಭದಲ್ಲಿ ಸುಳ್ಳು ಲೆಕ್ಕ ಕೊಟ್ಟಿದ್ದರೆ ಆ ಬಗ್ಗೆ ತೀವ್ರ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದೆವು. ಅದಕ್ಕೆ ಈಗ ಮತ್ತೊಂದು ಅಸೋಷಿಯೇಷನ್‌ನವರು ಹೇಳಿದ್ದಾರೆ, ದುರುದ್ದೇಶ ಪೂರ್ವಕವಾಗಿ ಆ ಸ್ಕೀಂನ್ನು ಮಾಡಿದ್ದಾರೆಂದು ಚಾರ್ಟರ್ಡ್ ಅಕೌಂಟೆಂಟ್‌ಗಳೇ ಇದ್ದರೆ ಸರಿಯಾಗಿತ್ತು, ಅದನ್ನು ತೆಗೆದು ಹಾಕಿ ಅಫಿಡವಿಟ್ ಕೊಡಬೇಕೆಂದು ಮಾಡಿ, ಸುಳ್ಳು ಲೆಕ್ಕ ಕೊಟ್ಟಿದ್ದಾರೆಂದು ಹಿಡಿದು ಶಿಕ್ಷೆ ಕೊಡಬೇಕೆಂಬ ಉದ್ದೇಶದಿಂದ ಇದನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಹೀಗಾದರೆ ಯಾವ ರೀತಿಯಲ್ಲಿ ಇದನ್ನು ನಿಯಂತ್ರಿಸಬೇಕು ?

೨–೩೦ ಪಿ. ಎಂ.

ಈ ಸದನದ ಮೂಲಕ ಅವರಲ್ಲಿ ಕೇಳಿಕೊಳ್ಳುವುದೇನೆಂದರೆ, ಅವರೆಲ್ಲ ಒಂದು ಕಡೆ ಸಂಘಟನೆಯಾಗಿ ತಮ್ಮ ಮೇಲೆ ಕೆಲವು ನಿಯಂತ್ರಣಗಳನ್ನು ಹಾಕಿಕೊಳ್ಳಬೇಕು. ಒಂದು ಪತ್ರಿಕೆಯೆಂದರೆ ಪೆಟರ್‌ನಿಟಿ ಬೆಳೆಯಬೇಕು, ಬರೀ ಓಚರ್ ಕಾಪಿ ಮಾಡುತ್ತಿದ್ದರೆ ಯಾರು ಕೇಳುವುದಕ್ಕೆ ತಯಾರಾಗುವುದಿಲ್ಲ. ನಮಗೆ ವಿಷಯಗಳು ಗೊತ್ತಾಗದ ಪರಿಸ್ಥಿತಿ ಉಂಟಾಗುತ್ತದೆ. ಈ ದೃಷ್ಟಿಯಿಂದ ಆ ಕ್ಷೇತ್ರದಲ್ಲಿರತಕ್ಕವರೆಲ್ಲರು ದೊಡ್ಡ ಮನಸ್ಸು ಮಾಡಿ ಸರಿಯಾದ ರೀತಿಯಲ್ಲಿ ಸಂಘಟನೆಯಾಗಿ ಸರ್ಕಾರದ ಜೊತೆ ಸಹಕರಿಸಿದರೆ ಮಾತ್ರ ಅದನ್ನೆಲ್ಲ ಹತೋಟಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಕೆಲವು ಪತ್ರಿಕೆಗಳವರು ನಮಗೆ ಇಚ್ಛೆಯೂ ಇಲ್ಲ, ನಾವು ಪ್ರಕಟಣೆಯನ್ನು ಮಾಡುದದಿಲ್ಲವೆಂದು ಹೇಳತಕ್ಕವರಿದ್ದಾರೆ. ಅವು ಬಹಳ ದೊಡ್ಡ ಪ್ರಮಾದಲ್ಲಿವೆ ಎಂದು ಹೇಳುವುದಕ್ಕೆ ತಯಾರಾಗಿಲ್ಲ. ಏಕೆಂದರೆ ಸಾಕಷ್ಟು ಸಣ್ಣ ಪತ್ರಿಕೆಗಳು ಮೈಸೂರಿನಂತಹ ಊರುಗಳಲ್ಲಿ ಉತ್ತಮವಾಗಿ ಪರಂಪರೆಯನ್ನು ಬೆಳೆಸಿಕೊಂಡು ಬಂದಿರತಕ್ಕ ಸಣ್ಣ ಪ್ರಮಾಣದ ಪತ್ರಿಕೆಗಳಿವೆ. ಸರ್ಕಾರದ ಉದ್ದೇಶವೇನೆಂದರೆ, ಯಾವುದೋ ಕೆಲವು ಜನರನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಾಮಾಣಿಕವಾಗಿ ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರತಕ್ಕ ಜನರಿಗೆ ರಕ್ಷಣೆ ಇಲ್ಲದ ಹಾಗೆ ಆಗಬಾರದು ಎಂದು. ಸಾಧ್ಯವಾದಷ್ಟು ಉದಾರವಾಗಿ ಸಣ್ಣ ಪತ್ರಿಕೆಗಳ ಬಗ್ಗೆ ವರ್ತಿಸತಕ್ಕ ನೀತಿಯನ್ನು ಇಟ್ಟುಕೊಂಡಿದ್ದೇವೆ. ಸ್ವಲ್ಪ ಮಟ್ಟಿಗೆ ಹಣದ ಅಪವ್ಯಯ ಆಗಬಹುದು. ಕೆಲವರು ಜೀವನ ನಿರ್ವಹಣೆಗೋಸ್ಕರ ಅಡ್ವರ್ಟೈಸ್‌ಮೆಂಟನ್ನು ಬಳಸಿಬೆಕೊಳ್ಳಬಹುದು, ವಿಶಾಲ ದೃಷ್ಟಿಯಿಂದ ಸಣ್ಣ ಪತ್ರಿಕೆಗಳ ಬಗ್ಗೆ ಒಂದು ಔದಾರ್ಯದ ನೀತಿಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸಬ್ಸಿಡಿ ಬಗ್ಗೆ ಹೇಳಿದ್ದಾರೆ ಆ ಬಗ್ಗೆ ಪ್ರತ್ಯೇಕವಾಗಿ ಪ್ರಸ್ತಾಪ ಮಾಡುತ್ತೇನೆ.

ಶ್ರೀ ಯು. ಬಿ. ಬೋರ್ಕರ್ —ಸಣ್ಣ ಪತ್ರಿಕೆಗಳ ವಿಚಾರವಾಗಿ ಹೇಳುತ್ತಾ, ಕೆಲವು ಪತ್ರಿಕೆಗಳವರು ತಮ್ಮ ಸ್ವಂತ ಜೀವನ ನಿರ್ವಹಣೆಗೋಸ್ಕರ ಪ್ರಕಟಣೆಯನ್ನು ಉಪಯೋಗಿಸಿಕೊಳ್ಳುತ್ತಾರೆಂದು ಹೇಳಿದಿರಿ. ಆದರೆ ಹಾಗೆ ಮಾಡುತ್ತಾರೇದು ಆ ಕಡೆ ಗಮನ ಹರಿಸಿ ಗ್ರೀನ್‌ಸಿಗ್ನಲ್ ಕೊಡುವುದಕ್ಕೆ ಹೋಗಬೇಡಿ. ಆ ಬಗ್ಗೆ ಸಮೀಕ್ಷೆ ನಡೆಸಿ ಹತೋಟಿಗೆ ತರುವುದಕ್ಕೆ ಪ್ರಯತ್ನಿಸಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಾನು ಗ್ರೀನ್ ಆಗಲೀ, ಡೇಂಜರ್ ಸಿಗ್ನಲ್ ಆಗಲೀ ಹಿಡಿಯುವುದಕ್ಕೆ ಸಾಧ್ಯವಿಲ್ಲ. ನಾವು ಕೆಲವು ಅಡ್ವರ್ಟೈಸ್‌ಮೆಂಟ್ ಕೊಡುತ್ತಿದ್ದೇವೆ. ನಿಮ್ಮ ಅಡ್ವರ್ಟೈಸ್‌ಮೆಂಟ್ ನಮಗೆ ಬೇಕಾಗಿಲ್ಲ, ನಾವು ಸ್ವತಂತ್ರವಾಗಿ ಪತ್ರಿಕೆಗಳನ್ನು ನಡೆಸುತ್ತೇವೆಂದು ಅವರು ಹೇಳಬಹುದು. ಇಂದಿನ ಆರ್ಥಿಕ ಪರಿಸ್ಥಿತಿಯಿಂದಾಗಿ ಮಾತ್ರ ಅವರು ಸರ್ಕಾರದ ಮೇಲೆ ಅವಲಂಬಿಸಿರಬಹುದು. ಒಮ್ಮೆಲೇ ಸರ್ಕಾರ ತನ್ನ ಹತೋಟಿಗೆ ತರುವುದಕ್ಕೆ ಹೋದರೆ ಪರಿಸ್ಥಿತಿ ಉಗ್ರವಾಗಬಹುದೆಂಬ ದೃಷ್ಟಿಯಿಂದ ಮೊದಲು ಅವರ ಮನವನ್ನು ಒಲಿಸುವುದಕ್ಕೆ ಪ್ರಯತ್ನಿಸುತ್ತೇವೆ. ಆ ಕ್ಷೇತ್ರದಲ್ಲಿರತಕ್ಕವರು ಸಂಘಟಿತರಾಗಿ ಸ್ವಯಂ ನಿಯಂತ್ರಣ ವ್ಯವಸ್ಥೆಯನ್ನು ತರಬೇಕು ಹಾಗೂ ತಮ್ಮ ಮೂಲಕ ಸರ್ಕಾರಕ್ಕೆ ಸಹಕಾರ ನೀಡಬೇಕೆಂದು ಹೇಳುತ್ತೇನೆ. ಕೆಲವು ಪತ್ರಿಕೆಗಳವರು ಹಾಗೆ ಮಾಡುತ್ತಿದ್ದರೂ ಕೂಡ ಸಣ್ಣ ಪತ್ರಿಕೆಗಳ ಬಗ್ಗೆ ಕಠಿಣವಾಗಿ ವರ್ತಿಸುವುದಕ್ಕೆ ಸಾಧ್ಯವಿಲ್ಲ, ಅದಕ್ಕೆ ತಮ್ಮ ಬೆಂಬಲವನ್ನು ಕೇಳುತ್ತೇನೆ. ಇನ್ನು ಬೆಂಗಳೂರಿಲ್ಲಿ ಒಂದು ಇಂಡೋರ್ ಬ್ಯಾಡ್‌ಮಿಂಟನ್ ಸ್ಟೇಡಿಯಂನ್ನು ಕಟ್ಟ

ಇದುವರೆಗೂ ಒಟ್ಟು ಮೂರು ಬಾರಿ ಹೋಗಿದ್ದಾರೆ. ನಮ್ಮ ಧರ್ಮ ಸಂಸ್ಕೃತಿ ಬಗ್ಗೆ ಒಳ್ಳೆಯ ಜನರನು ಹಿಡಿದು ಭಾಷಣ ಮಾಡಿಸಬೇಕು. ಆ ರೀತಿ ಭಾಷಣ ಮಾಡಿಸಿದ್ದರೆ ನಾವೇ ಅಧಿಕಾರದಲ್ಲಿರುತ್ತಿದ್ದೆವು ಎಂದು ಮಾನ್ಯ ಇಬ್ರಾಹಿಂರವರು ಹೇಳುತ್ತಿದ್ದರು. ಅವರೇ ಸಾಕಷ್ಟು ಕಡೆ ಭಾಷಣ ಮಾಡಿದ್ದರೂ ಏನೂ ಪ್ರಯೋಜನ ಕಂಡಹಾಗಿಲ್ಲ. ದರ್ಮ ಸಂಸ್ಕೃತಿಗಳ ಪ್ರಚಾರ ಮಾಡುವುದಕ್ಕೆ ಬೇಕಾದ ಅನುಕೂಲಗಳನ್ನು ಇಲಾಖೆಯವರು ಬೇಕಾದರೆ ಕೊಡಬಹುದು. ಆದರೆ ನಾವೇ ಜನರನ್ನು ಹುಡುಕಿ ಹಿಡಿದು ಭಾಷಣ ಮಾಡುವುದರಿಂದ ಪ್ರಯೋಜನವೂ ಅಗುವುದಿಲ್ಲ. ಸಾಧ್ಯವೂ ಆಗುವುದಿಲ್ಲ, ಜನರು ಯಾರೂ ಯಾರು ಭಾಷಣದ ಮೇಲೂ ಅವಲಂಬಿತವಾಗಿಲ್ಲ, ಭಾಷಣವನ್ನು ಕೇಳಿ ತಿರ್ಮಾನವನ್ನು ತೆಗೆದುಕೊಳುವುದಿಲ್ಲ. ಭಾಷಣವನ್ನು ಎಷ್ಟೇ ಚೆನ್ನಾಗಿ ಮಾಡಿದರೂ ಅವರ ನಡವಳಿಕೆಯನ್ನು ನೋಡುತ್ತಾರೆ, ಭಾಷಣಕ್ಕೂ ನಡವಳಿಕೆಗೂ ಭಿನ್ನವಾಗಿದ್ದರೆ ಆಮೇಲೆ ಪುಸ್ತಕದಲ್ಲಿರುವುದನ್ನೂ ಕೂಡ ಜನ ಒಪ್ಪದೇ ಇರತಕ್ಕ ಪರಿಸಿತಿಗೆ ಹೋಗಬಹುದು, **ಇವತ್ತು** ಸಂಸ್ಕೃತಿ ಪ್ರಸಾರ ಯೋಜನೆ ಇದೆ. ಯಾವುದಾದರೂ ಉತ್ತಮ ಗ್ರಂಥಗಳು ಲಭ್ಯವಾಗದೇ ಇರತಕ್ಕ ಪರಿಸ್ಥಿತಿ ಇದ್ದರೆ ಅಂಥದ್ದನ್ನು ಅಚ್ಚು ಹಾಕಿಸುವುದಕ್ಕೆ ಮತ್ತು ಮತ್ತು ವಿತರಣೆ ಮಾಡುವುದಕ್ಕೆ ಸೌಕರ್ಯವನ್ನು ಮಾಡಿಕೊಡುತ್ತಿದ್ದೇವೆ. ಆದರೆ ಭಾಷಣ ಮಾಡಿಸುವುದರ ಬಗ್ಗೆ ಗಮನವನ್ನು ಹರಿಸಿಲ್ಲ. ಮಾನ್ಯ ಇಬ್ರಾಹಿಂ ಅವರು ಇನ್ನೂ ಅನೇಕ ವಿಷಯಗಳನ್ನು ಹೇಳಿದರು. ಇವತ್ತು ಟಿಪ್ಪು ಸುಲ್ತಾನ್ ಅರಮನೆಯಲ್ಲಿ ಹಸುಗಳು, ದನಗಳು ಕತ್ತೆಗಳು ಸೇರಿವೆ ಎಂದು ಹೇಳಿದರು. ಅವೆಲ್ಲಾ ಸತ್ಯಕ್ಕೆ ಬಹಳ ದೂರವಾದಂಥ ಮಾತುಗಳು. ಟಿಪ್ಪುಸುಲ್ತಾನ್ ಅರಮನೆಗಳೇನಿವೆ ಇವು ಬಹಳ ಪ್ರಾಮುಖ್ಯವಾದುವುವೆಂದು ಪರಿಗಣಿಸಿ ಕೇಂದ್ರ ಸರ್ಕಾರದವರೇ ಅದರ ಮೈಂಟೆನ್ಸ್ಸನ್ನು ವಹಿಸಿಕೊಂಡಿದ್ದಾರೆ. Tippu Sultan's palace at Bangalore & Srirangaptna have been considered as monumental and National importance and the Archaelogical Survey of India has been protecting them. ಕತ್ತೆಗಳು ಒಳಗಡೆ ಹೊಗುತ್ತವೆ ಎಂದು ಹೇಳಿದರೆ ಬಹಳ ಆಶ್ಚರ್ಯವಾಗುತ್ತವೆ.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಮಾನ್ಯ ಇಬ್ರಾಹಿಂ ಅವರು ಅಲ್ಲಿಗೆ ಹೋಗಿದ್ದೇನಾದರೂ ಉಂಟೋ ಅಥವಾ ಅವರ ಕಾರ್ಯಕ್ರಮವನ್ನು ತಿಳಿದುಕೊಂಡು ಅವುಗಳೇನಾದರೂ ಬಿದ್ದವೋ ಏನೋ ನನಗೆ ಗೊತ್ತಿಲ್ಲ. ಇಬ್ರಾಹಿಂ ಅವರು ಟಿಪ್ಪುಸುಲ್ತಾನ್ ಏನೇನು ಮಾಡಿದ್ದಾನೋ ನನಗೆ ಗೊತ್ತಿಲ್ಲ ಎಂದು ಹೇಳಿದರು. ಅವರಿಗೆ ಗೊತ್ತಿಲ್ಲದೇ ಇರಬಹುದು. ಏಕೆಂದರೆ ಅವರು ಚರಿತ್ರೆ ಭೂಗೋಳ ತಿಳಿದುಕೊಳ್ಳುವುದಕ್ಕಿಂತ ಮೊದಲೇ ದೇಶವೆಲ್ಲಾ ಸುತ್ತಿಭಾಷಣ ಮಾಡುವುದಕ್ಕೆ ಸುರು ಮಾಡಿದ್ದರು. ಆದ್ದರಿಂದ ಅವರಿಗೆ ಏನೂ ಗೊತ್ತಿಲ್ಲದೇ ಇರಬಹುದು ಆದರೆ ಇವತ್ತು ಸಣ್ಣ ಸಣ್ಣ ಮಕ್ಕಳೂ ಟಿಪ್ಪುಸುಲ್ತಾನ್ ಬಗ್ಗೆ ತಿಳಿದುಕೊಂಡಿದ್ದಾರೆ. ಅವನ ಬಗೆ ನಾವು ಹೇಳಬೇಕಾದ್ದು ಏನೂ ಇಲ್ಲ. ಅವನೇ ಜನ ಮರೆಯದೇ ಇರುವಷ್ಟು ಮಾಡಿಹೋಗಿದ್ದಾನೆ. ಅವನನ್ನು ದೊಡ್ಡ ಮನುಷ್ಯನನ್ನಾಗಿ ನಾವು ಮಾಡುವಂಥ ಸಂದರ್ಭ ಏನೂ ಇಲ್ಲ. ಆದರೆ ಮಾನ್ಯ ಇಬ್ರಾಹಿಂ ಅವರು ಬಹಳ ರಂಜನೀಯವಾಗಿ ಭಾಷಣ ಮಾಡುತ್ತಾರೆ. ಅವರ ಭಾಷಣ ಸತ್ಯಂ, ಶಿವಂ, ಸುಂದರಂ ಭಾಷಣ. ಇಬ್ರಾಹಿಂ ಅವರ ಭಾಷಣ ಬಹಳ ಚೆನ್ನಾಗಿರುತ್ತೆ. ಅವರ ಭಾಷಣ ಬಿರಿಯಾನಿಗಿಂತ ರುಚಿ ಎಂದು ಕೆಲವರು ಹೇಳಿದರು. ಆದರೆ ಒಳ್ಳೆಯ ಬಿರಿಯಾನಿ ತಯಾರಿಯಲ್ಲಿ the first casuality is the truth, ಆದರೆ ಇವರು ಸತ್ಯದ ತಲೆ ಹೊಡೆದು ಬಿರಿಯಾನಿ ತಯಾರು ಮಾಡುತ್ತಾರೆ. ಆದ್ದರಿಂದ ನಾನು ಅವರಲ್ಲಿ ಪ್ರಾರ್ಥನ ಮಾಡಿಕೊಳ್ಳುತ್ತೇನೆ... ....

ಶ್ರೀ ಮಳ್ಳೂರು ಆನಂದರಾವ್.—ಬಿರಿಯಾನಿ ರುಚಿ ನಿಮಗೆ ಹೇಗೆ ಗೊತ್ತು ?

ಶ್ರೀ ಕೆ. ಎಚ್. ಶ್ರೀನಿವಾಸ್.—ನನಗೆ ಗೊತಿಲ್ಲ, ಜನ ಹೇಳುತ್ತಾರೆಂದು ಹೇಳಿದೆ.

ಶ್ರೀ ಮಳ್ಳೂರು ಆನಂದರಾವ್.—ಅಂದರೆ ನಿಮ್ಮದು first hand information ಅಲ್ಲ second hand information ಆಯಿತು.

ಶ್ರೀ ಕೆ. ಎಚ್. ಶ್ರೀನಿವಾಸ.—ಮತ್ತೆ ಸಿನಿಮಾ ತೋರಿಸುವಾಗ ಅದರಲ್ಲಿ ನಾಲ್ಕು ನಿಮಿಷ ಮಂತ್ರಿಗಳ ತಲೆ ಕಾಣಿಸುತ್ತದೆ, ಇನ್ನೊಂದು ನಿಮಿಷ ಮಾತ್ರ ಇನ್‌ಫರ್ಮೇಷನ್ ಬೇರೆ ಇರುತ್ತದೆ ಎಂದು ಹೇಳಿದರು. ನನಗೂ ಆ ಬಗ್ಗೆ ವಿಷಾದವಿದೆ. ಆದರೆ ಪ್ರತಿಯೊಬ್ಬರಲ್ಲೂ ಯಾವುದೇ ಮಹತ್ವದ ಕೆಲಸ

ಬೇಕೆಂದು ಹೇಳಿದೀರಿ. ಆ ಬಗ್ಗೆ ಈಗಾಗಲೇ ಯೋಜನೆಗಳು ಸಿದ್ಧವಾಗಿವೆ, ಅದನ್ನು ಇವತ್ತು ಲೋಕೋಪಯೋಗಿ ಇಲಾಖೆಯವರು ಪರಿಶೀಲನೆ ಮಾಡುತ್ತಿದ್ದಾರೆ. ಇವತ್ತಿನ ದಿವಸ ಪದವೀಧರರನ್ನು ತೆಗೆದುಕೊಂಡು ಕೇವಲ ೧೫೦ರೂಪಾಯಿಗಳನ್ನು ಕೊಡುತ್ತೀರಲ್ಲ ಅದು ಏತಕ್ಕೆ ಸಾಕಾಗುತ್ತದೆಂದು ಕೇಳಿದರು. ವಿದ್ಯಾಭ್ಯಾಸ ಮಾಡಿಯೂ ನಿರುದ್ಯೋಗಿಗಳಾಗಿರತಕ್ಕವರಿಗೆ ಕೆಲಸ ಸಿಕ್ಕುವ ತನಕ ಏನಾದರೊಂದು ಕೆಲಸಕ್ಕೆ ಹಚ್ಚಬೇಕೆಂದು, ಯಾವುದಾದರೊಂದು ತರಬೇತಿ ಇರಲಿ ಎಂದು ಮಾಡಿದ್ದೇವೆ. ಸಾಧಾರಣವಾಗಿ ಅವರವರ ಊರು ಮನೆಗಳಲ್ಲೇ ಅವರಿಗೆ ಕೆಲಸಗಳನ್ನು ಒದಗಿಸಿರುವುದರಿಂದ ೧೫೦ ರೂಪಾಯಿ ಕೂಡ ಒಂದು ಅರ್ಥಪೂರ್ಣ ಸಹಾಯವಾಗುತ್ತದೆಂದು ನಂಬಿದ್ದೇನೆ. ಇನ್ನೂ ಹೆಚ್ಚಿನ ಹಣದ ಸೌಲಭ್ಯವೇನಾದರೂ ಈ ಇಲಾಖೆಗೆ ದೊರೆತರೆ ಜಾಸ್ತಿ ಮಾಡುವುದನ್ನು ಪರಿಶೀಲನೆ ಮಾಡಬಹುದೇ ಹೊರತು ಈಗಿರತಕ್ಕ ಆರ್ಥಿಕ ಸೌಕಟಿನಲ್ಲಿ ಇದಕ್ಕಿಂತ ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಮಾನ್ಯ ಸದಸ್ಯರಾದ ಇಬ್ರಾಹಿಂರವರು ಉತ್ತರ ಹೇಳುವ ಕಾಲದಲ್ಲಿಯೇ ಇಲ್ಲಿ ಇಲ್ಲ. ಅವರು ಏನು ಹೇಳಿದ್ದಾರೆಂದರೆ ಯುವಜನ ಸೇವಾ ನಿರ್ದೇಶಕರಿಗೆ ಕನ್ನಡ ಬರುವುದಿಲ್ಲ, ನಮ್ಮ ಸಂಸ್ಕೃತಿ ಗೊತ್ತಿಲ್ಲವೆಂದು ಹೇಳಿದರಲ್ಲದೆ ಸಂಸ್ಕೃತಿಯ ಬಗ್ಗೆ ಒಂದು ಭಾಷಣವನ್ನೇ ಮಾಡಿದರು. ಅವರಿಗೆ ಕನ್ನಡ ಬರತ್ತದೆ ಇಲಾಖೆಯೇವರು ನಡೆಸತಕ್ಕ ಕನ್ನಡ ಭಾಷ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆಂದರೆ ಅವರಿಗೆ ತೃಪ್ತಿಕರವಾಗಿ ಅವರಿಗೆ ಕನ್ನಡ ಬರುತ್ತದೆಂದು ಅರ್ಥವಾಗುತ್ತದೆ. ಕನ್ನಡದ ಬಗ್ಗೆ ಅವರಿಗೆ ಯಾವುದೇ ಒಂದು ರೀತಿಯ ಅಲಕ್ಷ್ಯವೂ ಇಲ್ಲ. ಇನ್ನು ಸಂಸ್ಕೃತಿ ಬಗ್ಗೆ ಭಾಷಣ ಮಾಡುತ್ತಾ ಹೇಳದರು, ಯೂನಿಟಿ, ಡೈವರ್ಸಿಟಿ ... ಇವೆಲ್ಲ ಅವರ ಫೆಟ್ ಫ್ರೇಸ್‌ಗಳೆಂದು ಕಾಣುತ್ತದೆ. ಒಂದಿಷ್ಟು ಶಬ್ದಗಳನ್ನು ವಾಕ್ಯಗಳನ್ನು ಇಟ್ಟುಕೊಂಡಿದ್ದಾರೆ, ಅದನ್ನು ಯಾವ ಭಾಷಣಕ್ಕೆ ಬೇಕಾದರೂ ಹಿಂದಕ್ಕೆ ಮುಂದಕ್ಕೆ ಸೇರಿಸುತ್ತಾರೆ. ಅವರು ಹೇಳಿದರು, ವೈವಿಧ್ಯಮಯವಾಗಿ ರಾಷ್ಟ್ರೀಯ ಮನೋಭಾವನೆ ಬೆಳಸಬೇಕು, ಏಕತೆ ಬೆಳೆಯಬೇಕು ಎಂದು. ಹಾಗಿದ್ದಮೇಲೆ ನಮ್ಮ ಇಲಾಖೆಯ ನಿರ್ದೇಶಕರಿಗೆ ನಮ್ಮ ಸಂಸ್ಕೃತಿ ಗೊತ್ತಿಲ್ಲವೆಂದು ಹೇಗೆ ಹೇಳುವುದಕ್ಕೆ ಸಾಧ್ಯ ? ಭಾರತದ ಸಂಸ್ಕೃತಿಯಲ್ಲಿ ಒಂದು ಐಕ್ಯತೆ ಇದೆ, ಅದರಲ್ಲಿ ಒಂದು ಸಮಾನತೆ ಇದೆ. ವೈವಿಧ್ಯತೆ ಎಷ್ಟೇ ಇರಬಹುದು, ಅವರು ಪೇಟ ಹಾಕಿಕೊಂಡಿರಬಹುದು, ಟೋಪಿ ಹಾಕಿಕೊಂಡಿರಬಹುದು, ಹಾಗೆ ಇರಬಹುದು, ಹೀಗೆ ಇರಬಹುದು. ಭಾರತದ ಸಂಸ್ಕೃತಿ ಎಲ್ಲ ಒಂದೇ ಎಂದು ಒಪ್ಪಿಕೊಂಡ ಮೇಲೆ ಅವರಿಗೆ ಸಂಸ್ಕೃತಿ ಗೊತ್ತಿಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಮಳ್ಳೂರು ಅನಂದರಾವ್.—ಏಕತೆ, ವೈವಿಧ್ಯತೆ ಬಗ್ಗೆ ಮಾನ್ಯ ಸಚಿವರು ಹೇಳಿದರು. ಯುತ್‌ಸರ್ವೀಸಸ್‌ನಲ್ಲಿ ಆ ಒಂದು ಆದರ್ಶವನ್ನಿಟ್ಟುಕೊಂಡು ಹೊರಟಿದ್ದೀರಿ. ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕು ಎಂಬುದು ಸರಿ. ಭಾರತದ ಸಂಸ್ಕೃತಿಯೆಲ್ಲವೂ ಒಂದೇ ಎಂದು ಹೇಳಿದರು ಅದರಲ್ಲೂ ಕನ್ನಡದ ಸಂಸ್ಕೃಯೂ ಸೇರುತ್ತದೆ. ಈ ಸಂಸ್ಕೃತಿಯೂ ಗೊತ್ತಿದ್ದರೆ ಗ್ರಾಮಾಂತರ ಪ್ರದೇಶದಲ್ಲಿರುವ ಸಾಮಾನ್ಯ ಜನತೆಯ ಹತ್ತಿರ ಹೋದಾಗ ಅನುಕೂಲವಾಗುತ್ತದೆ. ಈ ಇಲಾಖೆಯಲ್ಲಿ ನೂರಕ್ಕೆ ನೂರರಷ್ಟು ಕನ್ನಡಿಗರನ್ನು ನೇಮಿಸಿದರೆ ಇನ್ನೂ ಹೆಚ್ಚಿನ ಪ್ರತಿಪಲವನ್ನು ಪಡೆಯಬಹುದೋ ಇಲ್ಲವೋ ಎಂಬುದನ್ನು ಸ್ವಲ್ಪ ಯೋಚನೆ ಮಾಡಿ.

ಚೇರ್ಮನ್.—ಮಾನ್ಯ ಸಚಿವರು ಪದೇ ಪದೇ ಈಲ್ಡ್ ಆಗಬಾರದು. ಈ ರೀತಿ ಮಾನ್ಯ ಸಚಿವರು ಬೇರೆಯವರಿಗೆ ಅವಕಾಶ ಕೊಡುತ್ತಿದ್ದರೆ ವೇಳೆ ಜಾಸ್ತಿಯಾಗುತ್ತದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಸದಸ್ಯರು ಈಲ್ಡ್ ಆಗಿ ಎಂದಾಗ ನಾವು ಆಗದೇ ಇದ್ದರೆ ಅದು ಅಷ್ಟು ಸೌಜನ್ಯವಾಗುವುದಿಲ್ಲ.

ಚೇರ್ಮನ್.—ಕೊನೆಯಲ್ಲಿ ಬೇಕಾದರೆ ಸ್ಪಷ್ಟೀಕರಣ ಕೇಳಲಿ.

ಶ್ರೀ ಕೆ. ಎಚ್. ಶ್ರೀನಿವಾಸ್,—ಯುವಜನಸೇವಾ ಇಲಾಖೆ ನಿರ್ದೇಶಕರು ವರ್ಷಕ್ಕೆ ಮೂರು ಸಾರಿ ಫಾರಿನ್‌ಗೆ ಹೋಗುತ್ತಾರೆ ಎಂದು ಮಾನ್ಯ ಸದಸ್ಯರು ಹೇಳಿರುವುದು ನಿರಾಧಾರವಾದುದು. ಅವರು ಈ ಇಲಾಖೆಗೆ ಸೇರಿದಮೇಲೆ ಒಟ್ಟು ಮೂರು ಬಾರಿ ಹೋಗಿದ್ದಾರೆ. ಅದು ನಿಜ. ಎರಡು ಬಾರಿ ಕೇಂದ್ರ ಸರ್ಕಾರದವರು ಆಯ್ಕೆ ಮಾಡಿದ್ದಾಗ ಹೋಗಿದ್ದರು. ಆಗ ಹೆಚ್ಚಿನ ಭಾಗ ಹಣವನ್ನು ಕೇಂದ್ರ ಸರ್ಕಾರದವರೇ ಕೊಟ್ಟಿದ್ದಾರೆ. ೧೯೭೪–೭೫ರಲ್ಲಿ ಒಂದು ಬಾರಿ ನಮ್ಮ ಸರ್ಕಾರದವರು ಅವರನ್ನು ಕಳಿಸಿದ್ದರು. ಆದರೆ ವರ್ಷಕ್ಕೆ ಮೂರು ಬಾರಿ ಹೋಗುತ್ತಾರೆ ಎಂದು ಹೇಳುವುದು ಸರಿಯಲ್ಲ ಅವರು

ವಾಗಬೇಕಾದರೂ ಮಂತ್ರಿಗಳ ಕೈಯಿಂದಲೇ ಆಗಬೇಕು ಎಂಬ ಮನೋಭಾವವಿದೆ. ನಮ್ಮ ಕಡೆ ಇರುವವರಲ್ಲೂ ಇದೆ ಆ ಕಡೆ ಇರುವವರಲ್ಲೂ ಇದೆ. ಅದ್ದರಿಂದ ಡಾಕ್ಯುಮೆಂಟರಿ ಫಿಲಂಗಳಲ್ಲಿ ಮಂತ್ರಿಗಳ ತಲೆ ಜಾಸ್ತಿ ಬೀಳುತ್ತದೆ. ನಾನು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ ಇಬ್ರಾಹಿಂ ಅವರು ಯಾವ ಕಡೆ ಕುಳಿತಿರುತ್ತಾರೆ ಆ ಕಡೆಗೂ ಸ್ವಲ್ಪ ಕ್ಯಾಮರಾ ತಿರುಗಿಸಿ ಎಂದು. (ನಗು) ನಾವು ಡಾಕ್ಯುಮೆಂಟರಿ ಫಿಲಂ ತಯಾರು ಮಾಡುವುದು ಯಾವುದೇ ಮಂತ್ರಿಗಾಗಲೀ ಸಂಬಂಧಪಡದೇ ರಾಜ್ಯದ ಮುಖ್ಯವಾದ ಭಾಗಗಳ ಇನ್ನಿತರ ಉತ್ತಮ ಕ್ಷೇತ್ರಗಳ ಬಗ್ಗೆ ಮತ್ತು ಉತ್ತಮ ಸೇವೆ ಸಲ್ಲಿಸಿರತಕ್ಕ ಮಹನೀಯರ ಬಗ್ಗೆ ಇರುತ್ತದೆ. ಆ ಬಗ್ಗೆ ಯಾವುದೇ ಕಂಪ್ಲೇಂಟ್ ಇರಲಿಕ್ಕಿಲ್ಲ.

ಮಾನ್ಯ ಸದಸ್ಯರಾದ ಅರಕೇರಿಯವರು ಬಿಜಾಪುರದಲ್ಲಿನ ಸ್ಟೇಡಿಯಂ ನಿಧಾನವಾಗುತ್ತಿರುವುದರ ಬಗ್ಗೆ ಹೇಳಿದರು. ಅದನ್ನು ಗಮನದಲ್ಲಿಟ್ಟುಕೊಂಡು ಆ ಕಾರ್ಯ ತ್ವರಿತಗತಿಯಲ್ಲಿ ಆಗುವಂತೆ ಕಾರ್ಯಕ್ರಮ ತೆಗೆದುಕೊಳ್ಳುವ ಬಗ್ಗೆ ಬರವಸೆ ಕೊಡುತ್ತೇನೆ. ಅಕಾಡೆಮಿಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ಗಳಿಗೆ ಮಾನ್ಯತೆ ಇಲ್ಲ ಎಂದು ಹೇಳಿದರು ಹಾಗೇನಿಲ್ಲ. ಮಲ್ಲಿಕಾರ್ಜುನಸ್ವಾಮಿಯವರು ಮಂತ್ರಿಗಳಾಗಿದ್ದಾಗ ಎಲ್ಲಾ ಅಕಾಡೆಮಿಗಳಿಗೂ ಕೆಲವು ಕಾಲ ಅವರೇ ಅಧ್ಯಕ್ಷರಾಗಿದ್ದರು. ಅನಂತರ ವೆಂಕಟಪ್ಪ ಎಂಬುವರಿಗೆ ಅಕಾಡೆಮಿ ಪ್ರಶಸ್ತಿಯನ್ನೂ ಕೊಡ ಕೊಟ್ಟಿದ್ದಾರೆ. ಹರಿಜನ ಸಾಹಿತಿಗಳ ಬಗ್ಗೆ ಸದಸ್ಯರು ಪ್ರಸ್ತಾಪ ಮಾಡಿಧರು. ಆ ಬಗ್ಗೆ ನನಗೂ ಗೊತ್ತಿದೆ, ಈ ವರ್ಗದಲ್ಲಿ ಕ್ರಿಯಾತ್ಮಕವಾದ ಹೊಸರೀತಿಯ ಸಾಹಿತ್ಯ ಬರುತ್ತಿದೆ, ದಲಿತ ಪಂಥ ಸಾಹಿತ್ಯ ನಿರ್ಮಾಣವಾಗುತ್ತಿದೆ, ಹರಿಜನ ಸಾಹಿತಿಗಳಿಗೆ ಯಾವರೀತಿಯ ರಕ್ಷಣೆ ಅಥವಾ ಪ್ರೋತ್ಸಾಹ ಕೊಡಬೇಕೋ ಕೊಡುತ್ತೇನೆ, ಅಂಥ ಸಂದರ್ಭಗಳಿದ್ದರೆ ದಯಮಿಟ್ಟು ನನ್ನ ಗಮನಕ್ಕೆ ತನ್ನಿ, ಪುಸ್ತಕಗಳನ್ನು ಬರೆದು ಅಚ್ಚು ಹಾಕಿಸತಕ್ಕ ಪರಿಸ್ಥಿತಿಯು ಲ್ಲಿಲ್ಲದೇ ಹೋದರೆ ಅದನ್ನು ಅಚ್ಚು ಹಾಕಿಸುವ ಬಗ್ಗೆ ಮತ್ತು ಅವರಿಗೆ ಪ್ರೋತ್ಸಾಹ ನೀಡುವ ಬಗ್ಗೆ ಹೆಚ್ಚಿನ ಅಧ್ಯತೆಯನ್ನು ಕೊಡಬಯಸುತ್ತೇನೆ, ನನ್ನ ಕೈಯ್ಯಲ್ಲಿ ಯಾವ ಯಾವ ಇಲಾಖೆಗಳಿವೆ ಅಲ್ಲೆಲ್ಲಾ ಹರಿಜನರಿಗೆ ನ್ಯಾಯವಾದ ಅವಕಾಶ ಒದಗಿಸಿಕೊಡಬೇಕು ಎಂದು ಹೇಳಿ ಅದರ ಬಗ್ಗೆ ತುಂಬಾ ಕಳಕಳಿಯನ್ನಿಟ್ಟುಕೊಂಡಿದ್ದೇನೆ. ಆ ಬಗ್ಗೆ ಸದನದ ಎಲ್ಲ ಸದಸ್ಯರ ನೆರವನ್ನೂ ಕೇಳುತ್ತೇನೆ. ಹರಿಜನರೇ ನಡೆಸುತ್ತಿರತಕ್ಕ ಪತ್ರಿಕೆಗಳ ಬಗ್ಗೆ ಪ್ರಸಾಪ ಮಾಡಿದರು. ಈಗಾಗಲೇ ಜಾಸ್ತಿ ಪ್ರಮಾಣದಲ್ಲಿ ಪ್ರೋತ್ಸಾಹ ನೀಡುತ್ತಿದ್ದೇವೆ, ಇನ್ನೂ ಸ್ವಲ್ಪ ಜಾಸ್ತಿ ಮಾಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ ಹರಿಜನರಿಗೆ ವಿಶೇಷ ಸೌಲಭ್ಯವನ್ನು ಕೊಟ್ಟಾಗ ಅದು ಅವರ ಕೈಗೆ ಸಿಗದಂತೆ ಅವರನ್ನು ವಂಚಿಸತಕ್ಕ ಜನರ ಜಾಲ ಇದೆ, ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಇದನ್ನು ತಪ್ಪಿಸಿ ಹರಿಜನರಿಗೆ ಭದ್ರತೆಯನ್ನು ರಕ್ಷಣೆಯನ್ನು ನೀಡಲು ಯಾವರೀತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂಬ ಬಗ್ಗೆ ಸಲಹೆಯನ್ನು ನಾನು ಸ್ವಾಗತಿಸುತ್ತೇನೆ. ಮಾನ್ಯ ಸದಸ್ಯರಾದ ಚಿಮನಿಕಟ್ಟೆ ಅವರು ಚಲನಚಿತ್ರದಂತೆ ರಂಗಭೂಮಿ ಕೂಡ ಮುಖ್ಯ ಎಂದು ಹೇಳಿದರು. ನಶಿಸಿ ಹೋಗುತ್ತಾ ಇರತಕ್ಕ ರಂಗಭೂಮಿಗೆ ಸಂರಕ್ಷಣೆ ಒದಗಿಸಿಕೊಡುವುದಕ್ಕಾಗಿ ಯೋಜನೆಯನ್ನು ಸಿದ್ಧ ಮಾಡುತ್ತಿದ್ದೇವೆ, ನಂತರ ಆಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ ಮಾನ್ಯ ಸದಸ್ಯೆಯರಾದ ಶ್ರೀಮತಿ ಮೋಟಮ್ಮನವರು ಸ್ವತಃ ಕ್ರೀಡಾಪಟುಗಳು. ಅವರು ಕ್ರೀಡಾಪಟುಗಳಿಗೆ ತರಬೇತಿ ಕೊಡುವುದಲ್ಲಿ ಸಾಕಷ್ಟು ಕೆಲಸವಾಗುತ್ತಿಲ್ಲ ಎಂದು ಹೇಳಿದರು. ಅಲ್ಲದೆ ಕ್ರೀಡಾಪಟುಗಳಿಗೆ ಪೌಷ್ಟಿಕ ಅಹಾರವನ್ನು ಕೊಡುವ ಅದ್ಯತೆಯನ್ನು ಒತ್ತಿಹೇಳಿದ್ದಾರೆ. ಇಷ್ಟೇ ಅಲ್ಲದೆ ಕ್ರೀಡಾಪಟುಗಳಿಗೆ ನೌಕರಿಯಲ್ಲಿ ಅಧ್ಯತೆ ಕೊಡುವ ವಿಷಯವನ್ನೂ ಪ್ರಸ್ತಾಪ ಮಾಡಿದರು. ಅವುಗಳ ಬಗ್ಗೆ ಖಂಡಿತ ವಿಶೇಷವಾದ ಲಕ್ಷ್ಯವನ್ನು ಕೊಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಮಾನ್ಯ ಮರಿಸ್ವಾಮಿಯವರು ಅಂಬೇಡ್ಕರ್ ಸ್ಮಾರಕ ಟೋರ್ನಮೆಂಟನ್ನು ಮಾಡಬೇಕೆಂದು ಹೇಳಿದ್ದಾರೆ. ಡಾ॥ ಅಂಬೇಡ್ಕರ್ ಮೆಮೊರಿಯಲ್ ಸ್ಟೇಟ್ ಲೆವೆಲ್ ಕಬ್ಬಡ್ಡಿ ಟೋರ್ನಮೆಂಟನ್ನು ಮಾಡಬೇಕೆಂದು ಈಗಾಗಲೇ ನಿರ್ಧಾರ ಮಾಡಿದ್ದೇವೆ. ಇದನ್ನು ಪ್ರಪ್ರಥಮವಾಗಿ ಬಿಜಾಪುರದಲ್ಲಿ ಮಾಡಬೇಕೆಂದು ಈಗಾಗಲೇ ಸೂಚನೆಯನ್ನು ಕೊಡಲಾಗಿದೆ.

ಶ್ರೀಮಾನ್ ಗಂಗಣ್ಣನವರು ರಾಯಚೂರಿನಲ್ಲಿ ಮ್ಯೂಸಿಯಂ ಅವಶ್ಯಕತೆ ಇದೆ ಎಂದು ಹೇಳಿದರು. ರಾಯಚೂರಿನಲ್ಲಿ ಮ್ಯೂಸಿಯಂಗೆ ಅಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಅಲ್ಲಿರತಕ್ಕ ಓಲ್ಡ್ ಗೆಸ್ಟ್ ಹೌಸ್‌ನ್ನು ಪುರಸಭೆ ಮ್ಯೂಸಿಯಂಗೆ ಕೊಡುವುದಕ್ಕೆ ಒಪ್ಪಿಕೊಂಡಿದೆ. ಆದುದರಿಂದ ಅಲ್ಲಿ ಶೀಘ್ರವಾಗಿ ಮ್ಯೂಸಿಯಂ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ, ಯೂತ್ ಸೆಂಟರ್ ಬಿಲ್ಡಿಂಗ್‌ನ್ನು ೨೭ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿದ್ದೀರಿ, ಆದರೆ ಇದು

ಯಾರಿಗೆ ಉಪಯೋಗವಾಗುತ್ತದೋ ಗೊತ್ತಿಲ್ಲ, ಬರೀ ಬೆಂಗಳೂರಿನಲ್ಲಿರತಕ್ಕ ಕಲಾವಿದರಿಗೆ ಮಾತ್ರ ಉಪಯೋಗವಾದರೆ ಸಾಲದು ಎಂದು ಹೇಳಿದ್ದಾರೆ. ನನ್ನ ಉದ್ದೇಶವೂ ಕೂಡ ೨೭ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿರತಕ್ಕ ಈ ಭವನ ನಿಜವಾಗಿ ಎಲ್ಲ ಯುವಕರಿಗೂ ಇದರ ಅನುಕೂಲವಾಗಬೇಕು, ಇದಕ್ಕೆ ಸಂಬಂಧಪಟ್ಟ ಸಂಘಸಂಸ್ಥೆಗಳಿಗೆ ಇದು ದೊಡ್ಡ ನೆರಳಾಗಬೇಕು ಎನ್ನತಕ್ಕ ಉದ್ದೇಶವಿದೆ. ಮಾನ್ಯ ಯುವಜನ ಇಲಾಖೆಯ ನಿರ್ದೇಶಕರು ಅಲ್ಲಿ ತಮ್ಮ ಆಫೀಸನ್ನು ಮಾಡಿಕೊಂಡಿದ್ದಾರೆ. ಈ ಬಿಲ್ಡಿಂಗ್‌ನ್ನು ಖಾಲಿ ಮಾಡಬೇಕು ಎಂದು ನಾನು ಆಜ್ಞೆ ಹೊರಡಿಸಿದ್ದೇನೆ. ಬೇರೆ ಯಾರೂ ಅದನ್ನು ಆಕ್ರಮಿಸುವುದಕ್ಕೆ ಅವಕಾಶ ಇರಕೂಡದು, ಯುವಜನರ ಪ್ರಾತಿನಿಧಿಕ ಸಂಘಸಂಸ್ಥೆಗಳ ಚಟುವಟಿಕೆಗಳನ್ನು ನಡೆಸುವುದಕ್ಕೆ ಮಾತ್ರ ಆ ಕಟ್ಟಡವನ್ನು ಮೀಸಲಾಗಿಡಬೇಕೇ ಹೊರತು ಇನ್ನಾವುದೇ ಸಾಮ್ರಾಜ್ಯ ನಡೆಸುವುದಕ್ಕೆ ಖಂಡಿತವಾಗಿ ಅವಕಾಶ ಕೊಡುವುದಿಲ್ಲ ಎಂದು ನಾನು ಸ್ಪಷ್ಟಪಡಿಸುತ್ತೇನೆ. ಯುವಜನ ಕೇಂದ್ರವನ್ನು ರಾಜ್ಯದ ತೆರೆದ ವಿಶ್ವವಿದ್ಯಾನಿಲಯವಾಗಿ ಮಾರ್ಪಾಡಾಗಬೇಕು ಎಂಬ ಕನಸನ್ನು ಸರ್ಕಾರ ಇಟ್ಟುಕೊಂಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಲಾವಿದರುಗಳಿಗೆ ಸಾಕಷ್ಟು ಪ್ರೋತ್ಸಾಹವಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಗ್ರಾಮಾಂತರ ಪ್ರದೇಶದ ಕಲಾವಿದರಿಗೆ ನಾವು ಸಾಕಷ್ಟು ಪ್ರೋತ್ಸಾಹವನ್ನು ಕೊಡುತ್ತಾ ಇದ್ದೇವೆ, ಜಮಖಂಡಿಯಲ್ಲಿ ಮಲ್ಲಯ್ಯ, ಗುರುಪಾದಯ್ಯ ಅವರು ಕೃಷ್ಣಪಾರಿಜಾತ ಆಟ ಆಡತಕ್ಕವರು ಇದ್ದಾರೆ. ಅವರಿಗೆ ೨೫೦೦ ರೂಪಾಯಿಗಳನ್ನು ಕೊಟ್ಟು ಆಡಿಸಿದ್ದೇವೆ. ಕಿತ್ತೂರು ರಾಣಿ ಚೆನ್ನಮ್ಮ ಆಟ ಆಡುತ್ತಾರೆ ಅವರಿಗೆ ೨,೦೦೦ ರೂಪಾಯಿಗಳನ್ನು ಕೊಟ್ಟು ಆಡಿಸಿದ್ದೇವೆ ಗೀಗೀ ಪದಗಳನ್ನು ಹಾಡತಕ್ಕವರ ಬಗ್ಗೆ ಮಾನ್ಯ ಅರಕೇರಿಯವರು ಅವರ ಭಾಗದಲ್ಲಿರತಕ್ಕ ಕಲಾವಿದರ ಬಗ್ಗೆ ಹೇಳಿದರು. ಇಂತಹ ಕಲಾವಿದರಗಳ ಪಟ್ಟಿ ಮಾಡಿ ಅವರಿಗೆ ಅಗತ್ಯವಾದ ನೆರವನ್ನು ಕೊಡಬೇಕು ಎಂದು ನಾನು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಇಷ್ಟು ವಿಷಯಗಳನ್ನು ಈ ಚರ್ಚೆಯಲ್ಲಿ ಮೂಡಿಬಂದಂಥ ನಿರ್ದಿಷ್ಟವಾದ ವಿಷಯಗಳ ಬಗ್ಗೆ ಹೇಳಿದ್ದೇನೆ. ಇನ್ನು ಸಾರ್ವತ್ರಿಕವಾದ ವಿಚಾರಗಳನ್ನು ಪ್ರಸ್ತಾಪಮಾಡಿ ಉತ್ತರವನ್ನು ಮುಗಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಯುವಜನ ಸೇವಾ ಇಲಾಖೆ ಏನು ಕೆಲಸಮಾಡುತ್ತಿದೆ, ಇದರಿಂದ ದೊಡ್ಡ ರೀತಿಯ ಪರಿಣಾಮವೇನೂ ಆಗಿಲ್ಲ, ಹತ್ತಾರು ಸಣ್ಣಪುಟ್ಟ ಕಾರ್ಯಕ್ರಮಗಳನ್ನು ಮಾಡಿದ್ದಾರೆ ಎಂದು ಟೀಕೆ ಮಾಡಿದ್ದಾರೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಗರಲ್ಲಿ ಬಹಳ ದೊಡ್ಡ ಸಾಧನೆಯಾಗಿದೆ ಎಂದು ಹೇಳಿಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ಆದರೆ ಆಗಿರತಕ್ಕ ಸಾಧನೆಯನ್ನು ಕಡೆಗಣಿಸುವುದು ಬೇಡ. ನಾವು ಇನ್‌ಫ್ರಾಸಟ್ರಕ್ಚರ್ ಮಾಡಿದ್ದೇವೆ. ರೂಪುರೇಷೆಗಳನ್ನು ತಯಾರಿಸಿದ್ದೇವೆ ಯುವಜನರ ಮನಸ್ಸು, ಬುದ್ಧಿ, ದೇಹ ಇವೆಲ್ಲವನ್ನೂ ಒಳ್ಳೆಯ ರೀತಿಯಲ್ಲಿ ಉಪಯೋಗಿಸಿ ಅವರು ನಾಳೆಯದಿವಸ ಸಮರ್ಥರಾದ ಪ್ರಜೆಗಳಾಗಿ ಕರ್ತವ್ಯ ನಿರ್ವಹಿಸುವುದಕ್ಕೆ ಅಗತ್ಯವಾದ ಭೂಮಿಕೆಯನ್ನು ಸಿದ್ಧಮಾಡಿದ್ದೇವೆ. ಇದು ನಾನಾ ರೀತಿಯ ಕಾರ್ಯಕ್ರಮಗಳನ್ನು ಮಾಡುವುದರಿಂದ ಸಾಧ್ಯವಿದೆ, ಇದಕ್ಕೆ ಪುಷ್ಟಿ ದೊರೆತರೆ, ಸಾಕಷ್ಟು ಹಣ ದೊರೆತರೆ ನಾವು ಅದಕ್ಕೆ ಕೊಡಬೇಕಾದಂಥ ಲಕ್ಷ್ಯವನ್ನು ಕೊಟ್ಟಪಕ್ಷದಲ್ಲಿ ಖಂಡಿತವಾಗಿ ಅದರ ಪರಿಣಾಮ ಇರುತ್ತದೆ. ಇದ್ದಕ್ಕಿದ್ದಹಾಗೆ ಪರಿಣಾಮ ಬೀರಬೇಕು ಎಂದರೆ ಆಗುವುದಿಲ್ಲ, ಮಾನ್ಯ ಸದಸ್ಯರು ಗ್ರಾಮಾಂತರ ಕ್ರೀಡೆಗಳ ಸ್ಟ್ಯಾಂಡರ್ಡ್ ಬಿದ್ದುಹೋಗುತ್ತಿದೆ ಎಂದು ಹೇಳಿದರು, ಅಂಥಾದ್ದೇನೂ ಕಂಡುಬಂದಿಲ್ಲ ಎಂದು ನಾನು ವಿನಯಪೂರ್ವಕವಾಗಿ ಹೇಳುವುದಕ್ಕೆ ಬಯಸುತ್ತೇನೆ. ಯಾವುದಾದರೂ ಮ್ಯಾಚ್‌ನಲ್ಲಿ ಗೆಲ್ಲುವುದು, ಸೋಲುವುದು ಇದ್ದೇ ಇರುತ್ತದೆ. ಟ್ರೋಫಿ ಗೆದ್ದುಬಿಟ್ಟರೆ ಶಿಖರಕ್ಕೆ ಹೋಗುತ್ತಾರೆಯೇ ಇಲ್ಲ ಸೋತು ಬಿಟ್ಟರೆ ಪಾತಾಳಕ್ಕೆ ಹೋಗುತ್ತಾರೆಯೇ? ಕ್ರೀಡೆಗಳಲ್ಲಿ ಸೋಲು ಗೆಲುವಿನ ಸಮನ್ವಯ ಮನೋಸ್ಥಿತಿ ಇರಬೇಕೆ ಹೊರತು ಟ್ರೋಫಿಗಳನ್ನು ತೆಗೆದುಕೊಂಡು ಏನು ಮಾಡಬೇಕು. ಟ್ರೋಫಿಗಳನ್ನು ತೆಗೆದುಕೊಂಡು ನಾಳೆದಿವಸ ಅದನ್ನು ಮಕ್ಕಳಿಗೆ ಆಟವಾಡುವುದಕ್ಕೆ ಕೊಡಬೇಕಷ್ಟೆ, ಯಾರೇ ಕಲಾವಿದರು ಆಟಗಾರರು ೩-೪ ದಿವಸಗಳೂ ಒಂದೇ ಫಾರಂನಲ್ಲಿ ಇರುವುದಕೆ ಸಾಧ್ಯವಿಲ್ಲ. ಟೀಂ ವರ್ಕ್ ಇರುತ್ತದೆ, ಒಂದೊಂದು ಬಾರಿ ವ್ಯತ್ಯಾಸವಾಗಬಹುದು. ಅದನ್ನು ಸಮಭಾವದಿಂದ ನೋಡಬೇಕು, ಸೋತವರನ್ನು ಮೂದಲಿಸತಕ್ಕಂಥ ಮನೋಸ್ಥಿತಿ, ಗೆದ್ದವರನ್ನು ಹೊಗಳತಕ್ಕಂಥ ಮನೋಸ್ಥಿತಿ ಹೊಂದರೆ ಸಮ ಭಾವದಿಂದನೋಡತಕ್ಕಂಥ ಮನೋಸ್ಥಿತಿಯನ್ನು ಹೊಂದಬೇಕು ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕ್ರಿಡಾ ಜಗತ್ತಿನಲ್ಲಿ ರಾರಾಜಿಸಿ ಸಾಕಷ್ಟು ಜನರಿಗೆ ಮನರಂಜನೆಯನ್ನು ಒದಗಿಸಿ, ಸರಿಯಾಗಿ ಕೆಲಸ ಸಿಕ್ಕದೆ ತೊಂದರೆ ಪಡತಕ್ಕವರು ಇದ್ದಾರೆ. ಅವರು ಕಲಾವಿದರಾಗಲೀ, ಕ್ರೀಡಾಪಟುಗಳಾಗಲೀ ಅವರು ಸಮಾಜದ ಸ್ವತ್ತು, ಅವರನ್ನು ಸಂರಕ್ಷಣೆ ಮಾಡಬೇಕಾದ್ದು ಅಗತ್ಯ, ಅವರಿಗೆ ವೆಲ್‌ಫೇರ್ ಮೆಸಿರ್ಸ್‌ನ್ನು ಕೈಗೊಳ್ಳಬೇಕು

ಎನ್ನುವುದನ್ನು ನಾನು ಸ್ವಾಗತಿಸುತ್ತೇನೆ ಈಗಾಗಲೇ ಇದರ ಸಣ್ಣ ಪ್ರಮಾಣದಲ್ಲಿ ಮಾಡುತ್ತಿದ್ದೇವೆ. ಯುವಜನರಲ್ಲಿ ಅಶಾಂತಿ ಏನಿದೆ ಅದಕ್ಕೆಲ್ಲಾ ಯುವಜನ ಇಲಾಖೆಯನ್ನೇ ಹೊಣೆ ಮಾಡುವುದು ಸರಿಯಲ್ಲ. ಯುವಜನರಲ್ಲಿ ನಾನಾಕಾರಣಗಳಿಗೋಸ್ಕರ ಅಶಾಂತಿ ಇದೆ. ಇದರಲ್ಲಿ ಬೇರೆ ಬೇರೆ ಸಂಕೀರ್ಣವಾದಂಥ ಮನೋಸ್ಥಿತಿಯಿಂದಾಗಿ ನಮ್ಮ ರಾಜ್ಯದಲ್ಲೇ ಅಲ್ಲ, ನಮ್ಮ ರಾಷ್ಟ್ರದ ಎಲ್ಲಾ ಕಡೆಯಲ್ಲೂ ಅಶಾಂತಿ ಇದೆ, ಮುಂದುವರೆದ ರಾಷ್ಟ್ರಗಳಲ್ಲೂ ಒಂದು ರೀತಿಯ ಅಶಾಂತಿ ಇದೆ, ಹಿಂದುಳಿದ ರಾಷ್ಟ್ರಗಳಲ್ಲೂ ಒಂದು ರೀತಿ ಇದೆ. ಇದನ್ನು ಹೋಗಲಾಡಿಸಬೇಕು ಎಂದರೆ, ತಂದೆತಾಯಿಗಳು ಎಷ್ಟೇ ಕೆಟ್ಟ ಚಾಳಿಗಳಿಗೆ ಬಲಿಬಿದ್ದರೂ ಕೂಡ ಮಕ್ಕಳು ಕಲಿತುಕೊಳ್ಳಬಾರದು ಎಂದು ಹೇಳುತ್ತಾರೆ. ಹಾಗಿಯೇ ತಲೆಮಾರುಗಳಿಂದ ಬಂದಂಥ ರೋಗಗಳು ಮುಂದಿನ ತಲೆಮಾರಿನವರಿಗೆ ಅಂಟದೇ ಇರುವ ರೀತಿಯಲ್ಲಿ ಮಾರ್ಗದರ್ಶನ ಕೊಡಬೇಕು. ನಾವು ಕ್ರಾಂತಿಯ ಮಾತನ್ನು ಹೇಳುತ್ತೇವೆ. ಯುವಜನರಲ್ಲಿ ಮುಖ್ಯವಾಗಿ ಆಗ ಬೇಕಾಗಿರತಕ್ಕಂಥ ಕ್ರಾಂತಿ ಮಾನಸಿಕ ಬದಲಾವಣೆ, ಮೌಲ್ಯಗಳ ಬದಲಾವಣೆ, ಕಂದಾಚಾರದ ಮೌಲ್ಯ ಗಳನ್ನು ಇಟ್ಟುಕೊಂಡಿರುವವರಿಗೆ, ಯುವಕರಲ್ಲಿ ಒಂದು ರೀತಿ ಇರುತ್ತದೆ, ಮುದುಕರಲ್ಲಿ ಒಂದು ರೀತಿ ಇರುತ್ತದೆ. ಇವತ್ತು ಉದ್ಯೋಗ ಎಂದರೆ ಏನು ಎಂಬ ಕಲ್ಪನೆ ಬೇಕು. ಇವತ್ತು ಯಾರು ವಿದ್ಯಾ ಭ್ಯಾಸ ಮಾಡುತ್ತಾರೆ ಅವರಿಗೆ ತಕ್ಷಣ ಟೆಲಿಫೋನ್, ಕಾರು, ಸಂಬಳ, ಫಲವತ್ತಾದ ಜಾಗ—ಈ ರೀತಿ ಎಲ್ಲಾ ಆಲೋಚನೆ ಮಾಡುತ್ತಾರೆ. ಸ್ಟೈಫಂಡ್ ಕೊಡುತ್ತೇವೆ ಕೆಲಸ ಸಿಗುವವರೆಗೆ ಕೆಲಸ ಮಾಡಿ, ಬೆಳಗ್ಗಿನಿಂದ ಸಂಜೆವರೆಗೆ ಆತ್ಮಕ್ಕೆ ತೃಪ್ತಿ ಬರುವಂಥ ಕೆಲಸಮಾಡಿ ಎಂದರೆ, ಇದಕ್ಕೆ ಏನು ನಾವು ಒದಿದ್ದು ಎನ್ನುವ ಮನೋಸ್ಥಿತಿ ಇದೆ, ಯುವಕರು ಓದಿ ಪಾಸು ಮಾಡಿದ ತಕ್ಷಣ ಅವರಿಗೆ ಸಂಬಳ, ಕಾರು, ಬಂಗಲೆ, ಸಾರಿಗೆ ಸೌಕರ್ಯ ಎಲ್ಲಾ ಬೇಕು ಸಾಲಂಕೃತ ವಧು ಸಿದ್ಧವಾಗಿರಬೇಕು ಎನ್ನುವ ಮನೋಸ್ಥಿತಿ ಇದ್ದರೆ ಇನ್ನು ೧೦ ವರ್ಷಗಳಲ್ಲ ಒಂದು ಶತಮಾನವಾದರೂ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಉದ್ಯೋಗದ ಕಲ್ಪನೆ ಏನಿದೆ ಅದನ್ನು ಬದಲಾವಣೆ ಮಾಡಬೇಕು. ನಾವು ಇವತ್ತಿನದಿವಸ ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ ಅದೇನೂ ದೊಡ್ಡ ಪ್ರಮಾಣದ ಕಾರ್ಯ ಕ್ರಮವಲ್ಲ. ಇನ್ನೂ ಬಹಳ ದೊಡ್ಡ ಪ್ರಮಾಣದಲ್ಲಿ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಾಕಿ ಯುವಜನರನ್ನು ಸಜ್ಜುಗೊಳಿಸುವುದಕ್ಕೆ ಸಾಧ್ಯವೇ, ಯಾವ ಸೇನೆಯನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವೇ, ಯುವಸೇನಾ ನಿಗಮವನ್ನು ಸ್ಥಾಪನೆಮಾಡಿ ಈ ದೊಡ್ಡ ಪ್ರಮಾಣದ ಸಮಸ್ಯೆಯನ್ನು ಎದುರಿ ಸುವುದಕ್ಕೆ ಸಾಧ್ಯವೇ ಎಂದು ನಾನು ಚಿಂತನೆಯನ್ನು ನಡೆಸಿದ್ದೇನೆ, ಇದಕ್ಕೆ ತಾವೂ ಕೊಡ ತಮ್ಮ ಅಭಿಪ್ರಾಯಗಳನ್ನು ಕೊಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇವತ್ತು ಒಂದು ಸಂತೋಷದ ವಿಚಾರ ಏನೆಂದರೆ, ಯುವಜನರ ಬೇಡಿಕೆಗೆ ಒಪ್ಪಿಗೆ ಕೊಡುತ್ತೀರ ಎಂದು ನಾನು ನಂಬಿದ್ದೇನೆ. ಇವತ್ತು ರಾಜ್ಯಮಟ್ಟದ ಯುವಜನರ ಮೇಳ ಪ್ರಾರಂಭವಾಗತಕ್ಕಂಥಾದ್ದಿದೆ. ಎಲ್ಲಾ ಪಕ್ಷಗಳವರು, ಎಲ್ಲಾ ಸಿದ್ಧಾಂತಗಳನ್ನು ಒಪ್ಪತಕ್ಕ ಯುವಜನರು ಒಂದೇ ವೇದಿಕೆಯಲ್ಲಿ ಬಂದಿದ್ದಾರೆ. ಮುಂದಿನ ಯುವಜನ ತಲೆಮಾರಿಗೆ, ಹೊಸ ದಾರಿಗೆ ಈ ಫೆಸ್ಟಿವಲ್ ಕೂಡ ನಾಂದಿಯಾದೀತು ಎಂದು ನಾನು ಈ ಸಂದರ್ಭದಲ್ಲಿ ಆಸೆಪಡುತ್ತೇನೆ.

ಆದಕ್ಕೆ ಯುವ ಜನ ಇಲಾಖೆಯಿಂದ ಪೂರ್ಣ ಬೆಂಬಲ ಕೊಟ್ಟು ಅದರ ಸಂಪೂರ್ಣ ವೆಚ್ಚವನ್ನು ತಮ್ಮೆಲ್ಲರ ಅನುಮತಿಯ ಮೇರೆಗೆ ಖರ್ಚು ಮಾಡಲು ಅವರಿಗೆ ಕೊಟ್ಟಿದ್ದೇವೆ.

3-00 P.M.

ಶ್ರೀ ಪಿ. ರಾಮದೇವ್.—ನಮಗೆ ಯಾರಿಗೂ ಇನ್‌ವಿಟೇಷನ್ ಬಂದಿಲ್ಲ. ಎಲ್ಲಾ ಪಕ್ಷದವರೂ ಇಲ್ಲ.

ಅಧ್ಯಕ್ಷರು.—ಆ ಮೇಲೆ ಸ್ಪಷ್ಟೀಕರಣ ಕೇಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇನ್ನು ಪ್ರಾಚ್ಯ ವಸ್ತು ಇಲಾಖೆಯ ವಿಷಯದ ಬಗ್ಗೆ ನಾನು ಸ್ಪಷ್ಟ ಪಡಿಸುವುದು ಏನೆಂದರೆ, ನಾವು ಸಂರಕ್ಷಿಸತಕ್ಕಂಥ ಏನು ಪ್ರಾಚ್ಯ ವಸ್ತುಗಳು ಇದ್ದಾವೆ ಎಂದರೆ ಸುಮಾರು ೬೮೬, ಇನ್ನು ೪೮೪ನ್ನು ಅರ್ಕಿಲಾಜಿಕಲ್ ಸರ್ವೆ ಆಫ್ ಇಂಡಿಯಾದವರು ನೋಡಿಕೊಳ್ಳು ತ್ತಿದ್ದಾರೆ, ಟಿಪ್ಪುಸುಲ್ತಾನ್ ಅರಮನೆಯನ್ನು ಅವರೇ ರಕ್ಷಣೆ ಮಾಡುತ್ತಿದ್ದಾರೆ.

ಒಬ್ಬ ಸದಸ್ಯರು.—ಈಗಲೇ......

ಶ್ರೀ ಕೆ. ಎಚ್. ಶ್ರೀನಿವಾಸ್.—ಇಲ್ಲ ಮೊದಲಿನಿಂದಲೂ. ಇತ್ತೀಚೆಗೆ ಈ ದಿಶೆಯಲ್ಲ ನಮ್ಮ ರಾಜ್ಯಕ್ಕೆ ಲಭಿಸಿರತಕ್ಕ ಲಾಭವನ್ನು ನಾನು ಪ್ರಸ್ತಾಪ ಮಾಡುವುದಾದರೆ ಬೆಂಗಳೂರು ನಗರದಲ್ಲಿ ಸದರನ್ ಅರ್ಕಿಲಾಜಿಕಲ್ ಸರ್ವೆ ಆಫ್ ಇಂಡಿಯಾದ ಆಫೀಸ್ ಸ್ಥಾಪನೆಯಾಗಿದೆ. ಆದರೆ ದುರಾದೃಷ್ಟವಶಾತ್ ನಮ್ಮ ಬೀದರ್, ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳನ್ನು ತೆಗೆದುಕೊಂಡು ಹೋಗಿ ಹೈದರಾಬಾದ್‌ಗೆ ಸೇರಿಸಿ ಬಿಟ್ಟಿದ್ದಾರೆ. ಅದನ್ನೂ ಸಹ ನಮ್ಮದಕ್ಕೆ ಸೇರಿಸಿಕೊಳ್ಳಬೇಕು ಎನ್ನುವ ಬಗ್ಗೆ ಪತ್ರ ವ್ಯವಹಾರಗಳು ನಡೆಯುತ್ತಿದೆ. ಇವತ್ತು ನಮ್ಮ ಮುಂದಿರತಕ್ಕ ೪½ ಲಕ್ಷ ರೂ.ಗಳಲ್ಲಿ ನಾವು ಇಷ್ಟನ್ನೂ ದುರಸ್ತಿ ಮಾಡಬೇಕಾಗಿರತಕ್ಕಂಥದ್ದು ಕಷ್ಟ. ದುರಸ್ತಿ ಮಾಡಬೇಕಾಗಿರತಕ್ಕಂಥವುಗಳು ೪೦ ಇದ್ದಾವೆ, ಒಂದೊಂದಕ್ಕೂ ೫೦ ಸಹಸ್ರ ರೂಪಾಯಿಗಳು ಬೇಕಾಗುತ್ತವೆ. ಅವುಗಳ ರಕ್ಷಣೆಗೋಸ್ಕರ ೨೫೦ ಜನ ವಾಚ್ ಅಂಡ್ ವಾರ್ಡ್ ಬೇಕಾಗಿದೆ. ಆದರೆ ಅವರನ್ನು ಇಟ್ಟುಕೊಳ್ಳುವುದಕ್ಕೂ ಶಕ್ತಿ ಇಲ್ಲ. ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಗ್ರಾಜ್ಯುಯೇಟ್ಸ್‌ಗಳು ಏನಿದ್ದಾರೆ ಅವರುಗಳನ್ನು ಒಂದೊಂದು ಕಡೆಗೆ ಏತಕ್ಕೆ ಹಾಕಬಾರದೆಂದು ಆಲೋಚನೆ ನಡೆಸಿದ್ದೇನೆ. ಮತ್ತು ಇತ್ತೀಚೆಗೆ ನಮ್ಮ ಮೈಸೂರು ಅರಮನೆಯನ್ನು ಮತ್ತು ಅಲ್ಲಿರತಕ್ಕಂಥ ಇತರ ವಸ್ತುಗಳಿಂದ ಪ್ರವಾಸಿಗರು ಆಕರ್ಷಿತರಾಗುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತಿದ್ದೇವೆ. ಬೇರೆ ಕಡೆಯಲ್ಲಿರುವಂತೆ ಸೌಂಡ್ ಅಂಡ್ ಲೈಟ್‌ನ ವ್ಯವಸ್ಥೆ ಮಾಡಬೇಕು ಎನ್ನುವ ಬಗ್ಗೆ ಯೋಜನೆಗಳನ್ನು ಸಿದ್ಧ ಮಾಡಿದ್ದೇವೆ. ಅದರ ಬಗ್ಗೆ ಬಹಳ ತೀವ್ರ ರೀತಿಯಲ್ಲಿ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏನಿದೆ, ಅದು ಕನ್ನಡದ ಬಗ್ಗೆ ಯಥೋಚಿತ ಕೆಲಸಗಳನ್ನು ನಡೆಸಿಕೊಂಡು ಬಂದಿದೆ. ಇನ್ನು ನಮ್ಮ ಸಂಸ್ಕೃತಿಯು ಒಂದು ಹಿನ್ನಲೆಯಲ್ಲಿ ಬಹಳ ಹೆಚ್ಚಿನ ರೀತಿಯಲ್ಲಿ ಪ್ರಕಾಶಕ್ಕೆ ತರುವುದಕ್ಕೆ ಪ್ರಯತ್ನ ನಡೆಸುತ್ತಿದ್ದೇವೆ. ನಮ್ಮ ಸಂಸ್ಕೃತಿಯನ್ನೆಲ್ಲಾ ನಾವು ಮರೆತು ಬಿಟ್ಟಿದ್ದೇವೆ ಎನ್ನತಕ್ಕದ್ದು ಸರಿಯಲ್ಲ. ಇವತ್ತು ನಾವು ಯಕ್ಷಗಾನದ ಬಗ್ಗೆ ಪ್ರಾಮುಖ್ಯವಾದ ಗಮನವನ್ನು ಕೊಟ್ಟಿದ್ದೇವೆ ಮತ್ತು ಅದರ ಬಗ್ಗೆ ಬಹಳ ಸಂತೋಷದ ವಿಷಯವನ್ನು ತಿಳಿಸುವುದಕ್ಕೆ ಬಯಸುತ್ತೇನೆ. ಮುಂದಿನ ವರ್ಷ ವಿಶ್ವ ಸಂಸ್ಥೆಯವರು ಇಂಟರ್ ನ್ಯಾಷನಲ್ ಚಿಲ್ಡ್ರನ್ಸ್ ಇಯರ್ ಎಂದು ಕರೆದಿದ್ದಾರೆ. ಅದಕ್ಕೆ ಅವರು ದೊಡ್ಡ ಅಂತರರಾಷ್ಟ್ರೀಯ ಮಕ್ಕಳ ಮೇಳವನ್ನು ನಡೆಸುತ್ತಿದ್ದು ಅದಕ್ಕೆ ಸಂಸ್ಕೃತಿಕ ತಂಡವನ್ನು ಕಳುಹಿಸಿಕೊಡಿ ಎಂದು ಅವರು ಕೇಳಿದ್ದರಲ್ಲಿ ಇಡೀ ಭಾರತ ದೇಶದ ಪ್ರತಿನಿಧಿಯಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸಾಲಿಗ್ರಾಮದಲ್ಲಿರತಕ್ಕ ಮಕ್ಕಳ ಯಕ್ಷಗಾನ ಮೇಳದ ಒಂದು ಆಯೋಗವು ಹೋಗಲಿದೆ. ಅದಕ್ಕೆ ೧ ಲಕ್ಷ ೩೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ನಾವು ಒಂದು ಮೇಳವನ್ನು ಕಳುಹಿಸಿಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದ ಒಂದು ಸಂಸ್ಕೃತಿಯನ್ನು ಪ್ರತಿಬಿಂಬಿಸತಕ್ಕ ಈ ಯಕ್ಷಗಾನ ಮೇಳದವರು ವಿಶ್ವ ಸಂಸ್ಥೆಯವರು ನಡೆಸುತ್ತಿರತಕ್ಕಂಥ ಸಾಂಸ್ಕೃತಿಕ ವೇದಿಕೆಯ ಮೇಲೆ ತಮ್ಮ ಪ್ರದರ್ಶನವನ್ನು ಕೊಡಲಿದ್ದಾರೆ. ಅದೂ ಒಂದು ಶಾಲಾ ಬಾಲಕರ ತಂಡದಿಂದ ಇದು ನಡೆಯುತ್ತಿರುವುದರಿಂದ ನಿಜವಾಗಿಯೂ ಇದು ಹರ್ಷ ಪಡಬೇಕಾದಂಥ ಸಂಗತಿಯಾಗಿದೆ. ಹಾಗೂ ಸಧ್ಯದಲ್ಲಿಯೇ ಅವರು ನಿಮ್ಮೆಲ್ಲರಿಗೂ ಒಂದು ಪ್ರದರ್ಶನವನ್ನು ನೀಡಲಿರುವುದರಿಂದ ತಾವುಗಳೆಲ್ಲರೂ ಆ ಸಮಯದಲ್ಲಿ ಆ ಬಾಲಕರ ತಂಡಕ್ಕೆ ಶುಭ ಹಾರೈಸಬೇಕೆಂದು ಈ ಸಂದರ್ಭವಲ್ಲಿ ತಮ್ಮೆಲ್ಲರನ್ನೂ ಕೇಳಿಕೊಳ್ಳುವುದಕ್ಕೆ ಬಯಸುತ್ತೇನೆ,

ಇನ್ನು ಅಕಾಡಮಿಗಳ ಬಗ್ಗೆ ಸಾಕಷ್ಟು ಚರ್ಚೆಯಾದಾಗ ಅನೇಕ ಬಾರಿ ಆದರ ಬಗ್ಗೆ ನಾನು ಹೇಳಿದ್ದೇನೆ. ಅದು ಒಂದು ತ್ರಿಶಂಕು ಪರಿಸ್ಥಿತಿಯಲ್ಲಿದೆ. ಅದು ಒಂದು ಅಡ್ವೈಜರಿ ಬಾಡಿಯಲ್ಲ ಸ್ವಾಯತ್ತ ಬಾಡಿಯೂ ಅಲ್ಲ. ಅದರ ಬಗ್ಗೆ ನಮ್ಮ ಅಧಿಕಾರಿಗಳನ್ನು ಕೇಳಿದರೆ ಅದೂ ಹೌದು, ಇದೂ ಹೌದು ಎಂದು ಹೇಳುತ್ತಾರೆ. ಆದುದರಿಂದ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಅದುದರಿಂದ ಅವರು ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಒಂದು ಫೈನಲ್ ಆಗಿ ಅಟಾನ್‌ಮಸ್ ಬಾಡಿಗೆಯಾಗಿದ್ದರೆ ಅವರು ಅದನ್ನು ಮಾಡುವುದಕ್ಕೆ ಅನುಕೂಲವಾಗುತ್ತವೆಂದು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಅದರ ಬಗ್ಗೆ ಫೈಲನ್ನು ಸಿದ್ಧ ಮಾಡಿಟ್ಟಿದ್ದೇವೆ. ಮಂತ್ರಿ ಮಂಡಲದ ಒಪ್ಪಿಗೆ ಆದ ತಕ್ಷಣ ಅತಿ ಶೀಘ್ರವಾಗಿ ಆ ಒಂದು ಕ್ರಮವನ್ನು ನಡೆಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಮತ್ತು ಈ ಅಕಾಡಮಿಕ್‌ಗೋಸ್ಕರ ಒಂದು ಬಿಲ್ಡಿಂಗ್‌ನ ಫೌಂಡೇಷನ್‌ನ್ನು ರವೀಂದ್ರ ಕಲಾ ಕ್ಷೇತ್ರದ ಪಕ್ಕದಲ್ಲಿ ಹಾಕಿ ಯಾವುದೋ ಜಮಾನಾ ಆಯಿತು. ಇಲ್ಲಿಯವರೆಗೂ ಯಾವ ಕಾರ್ಯವೂ ಆಗಿಲ್ಲ. ಅದನ್ನು ಆದಷ್ಟು ಶೀಘ್ರಗತಿಯಲ್ಲಿ ಕಾರ್ಯಗತ ಮಾಡಬೇಕು ಎನ್ನುವ ಬಗ್ಗೆ ಒಂದು ಅಂತಿಮವಾದ ತೀರ್ಮಾನವನ್ನು ಮಾಡಿದ್ದೇವೆ.

ಕೊನೆಯದಾಗಿ ಸಿನಿಮಾದ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಿ ಅಲ್ಲಿಗೆ ಜನಗಣಮನವನ್ನು ಹಾಡಿ ಬಿಡುತ್ತೇನೆ. ಸಬಿ ಡಿ ಕೊಡುವ ವಿಚಾರ ತಮಗೆಲ್ಲಾ ಗೊತ್ತಿದೆ. ಸಬ್ಸಿಡಿಯು ನಿಯಮಾವಳಿ ಗಳಲ್ಲಿ ಗುಣಮಟ್ಟವನ್ನು ಆಧರಿಸಿ ಕೊಡಬೇಕೆಂದಿತ್ತು. ಆ ಅನಂತರ ಆ ನಿಯಮವನ್ನು ತಡೆಹಿಡಿಯ ಲಾಗಿದೆ. ಗುಣಮಟ್ಟ ಒಂದನ್ನೇ ಲಕ್ಷ್ಯಕ್ಕೆ ತೆಗೆದುಕೊಳ್ಳದೇ ಕರ್ನಾಟಕ ರಾಜ್ಯದಲ್ಲಿ ತಯಾರು ಆಗತಕ ಂಥ ಎಲ್ಲಾ ಚಿತ್ರಗಳಿಗೂ ಕೂಡ ನಾವು ಸಬ್ಸಿಡಿಯನ್ನು ಕೊಡುತ್ತಾ ಬಂದಿದ್ದೇವೆ. ಇದರಿಂದ ದೊಡ್ಡ ಪರಿಣಾಮವಾಗಿದೆ. ಸಬ್ಸಿಡಿ ಕೊಡುವುದರ ಉದ್ದೇಶ ಎರಡು ಇದೆ. ಮೊದಲನೆಯದಾಗಿ ಈ ಒಂದು ಕೈಗಾರಿಕೆ ಏನಿದೆ ಅದು ನಮ್ಮ ರಾಜ್ಯದಲ್ಲಿ ಕಾಲೂರಿ ಅದರಿಂದಾಗಿ ಸಾಕಷ್ಟು ಜನಗಳಿಗೆ ಉದ್ಯೋಗವಕಾಶ ದೊರೆಯ ಬೇಕು ಎನ್ನತಕ್ಕದ್ದೇ ಆಗಿದೆ. ಎರಡನೆಯದಾಗಿ, ಇದರಿಂದಾಗಿ ಹೆಚ್ಚು ಕನ್ನಡ ಚಿತ್ರಗಳು ಬರಬೇಕು, ಆರ್ಥಿಕ ಸಿ ತಿ, ಮತ್ತು ಆರ್ಥಿಕ ಶಕ್ತಿ ಇಲ್ಲದೆ ಇರತಕ್ಕಂಥವರು ನಿಜವಾಗಿಯೂ ಚಲನ ಚಿತ್ರ ದಲ್ಲಿ ಅನುಭವವಿರತಕ್ಕಂಥವರು ಸ್ವತಂತ್ರವಾಗಿ ಚಲನ ಚಿತ್ರವನ್ನು ಮಾಡುವುದಕ್ಕೆ ಮನಸ್ಸು ಇರುವಂಥ ವರಿಗೂ ಅನುಕೂಲವಾಗಬೇಕು ಎನ್ನುವ ಉದ್ದೇಶದಿಂದ ಈ ಒಂದು ಅವಕಾಶವನ್ನು ನಿರ್ಮಾಣ ಮಾಡಿ ಕೊಟ್ಟಿದ್ದೇವೆ. ಇದರಿಂದಾಗಿ ಇವತ್ತು ಏನಾಗಿದೆ ಎಂದರೆ ನಮ್ಮ ಕನ್ನಡ ಚಿತ್ರಗಳು ಗಣನೀಯವಾಗಿ ಹೆಚ್ಚಾಗಿರುವುದು ಒಂದೇ ಅಲ್ಲದೇ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಚಿತ್ರಗಳು, ಒಂದಲ್ಲ ಎರಡಲ್ಲ ಪ್ರತಿ ವರ್ಷವೂ ಬಹುಮಾನವನ್ನು ಪಡೆಯುವಂಥಾ ಚಿತ್ರಗಳು ನಿರ್ಮಾಣ ವಾಗುತ್ತಿವೆ. ಇವತ್ತು ಕರ್ನಾಟಕ ರಾಜ್ಯ ರಾಷ್ಟ್ರದಲ್ಲಿಯೇ ಚಲನ ಚಿತ್ರಗಳನ್ನು ತಯಾರು ಮಾಡ ತಕ್ಕಂಥ ರಾಜಧಾನಿಯಾಗಿ ಮಾರ್ಪಾಡು ಆಗುತ್ತಿದೆಂದು ಹೆಮ್ಮೆಯಿಂದ ಹೇಳಬಹುದಾಗಿದೆ. ಆದರೆ ಇನ್ನೊಂದು ಸಂದರ್ಭದಲ್ಲಿ ಚಿತ್ರ ತಯಾರು ಮಾಡತಕ್ಕಂಥವರೆಲ್ಲಾ ಸಬ್ಸಿಡಿ ತೆಗೆದುಕೊಳುತ್ತಿದ್ದಾರೆ, ಟ್ಯಾಕ್ಸ್ ಎಗ್ಜಂಷನ್ ಪಡೆದುಕೊಳ್ಳುತ್ತಿದ್ದಾರೆ, ಇದರಿಂದಾಗಿ ಬುದ್ಧಿವಂತರಿಗೆ ಮತ್ತು ನಿಜವಾಗಿಯೂ ಈ ಒಂದು ಸೌಲಭ್ಯ ದೊರೆಯಬೇಕಾದಂಥವರಿಗೆ ಕೆಲವೊಮ್ಮೆ ದೊರೆಯುವುದಿಲ್ಲ, ಕೊಡಲು ಅನರ್ಹರಾಗಿರ ತಕ್ಕಂಥವರಿಗೂ ಅದು ಸಿಕ್ಕಿ ಬಿಡುತ್ತಿದೆಂದು ಹೇಳಿದರು. ಆ ರೀತಿ ಕೆಲವು ಲೋಪದೋಷಗಳು ಇರ ಬಹುದು. ಆದುದರಿಂದ ನಾವು ಮತ್ತೆ ಏತಕ್ಕೆ ಗುಣ ಮಟ್ಟವನ್ನು ಆಧರಿಸಿ ಸಬ್ಸಿಡಿ ಕೊಡತಕ್ಕ ನಿಯಮ ವನ್ನು ತರಬಾರದು ಎಂದು ಬಹಿರಂಗವಾಗಿ ಆಲೋಚನೆ ಮಾಡಿದಾಗ, ಆ ಕ್ಷೇತ್ರದಲ್ಲಿರತಕ್ಕವರ ಮುಂದೆ ಈ ವಿಷಯವನ್ನು ಇಟ್ಟಾಗ, ಆ ರೀತಿ ಮಾಡಬೇಡಿ ಚಲನ ಚಿತ್ರದ ನಿರ್ಮಾಣಕ್ಕೆ ಬಹಳ ಧಕ್ಕೆಯಾಗುತ್ತ ದೆಂದು ಹೇಳಿದ್ದಾರೆ. ಅವರು ಆ ರೀತಿ ತಮ್ಮ ಅಭಿಪ್ರಾಯವನ್ನು ಬಹಳ ತೀವ್ರವಾಗಿ ವ್ಯಕ್ತ ಪಡಿಸಿ ದ್ದಾರೆ. ಅದನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಆದುದರಿಂದ ಇದರಲ್ಲಿ ಸಣ್ಣ ಪುಟ್ಟ ಲೋಪ ದೋಷಗಳನ್ನು ಆದಷ್ಟು ಬೇಗನೆ ನಿವಾರಣೆ ಮಾಡಿ ಬಹುಶಃ ಇನ್ನು ೨–೩ ವರ್ಷಗಳಲ್ಲಿ ನಮ್ಮ ನೀತಿ ಏನಿರುತ್ತದೆಂಬುದನ್ನು ನಾನು ಅತಿ ಶೀಘ್ರವಾಗಿ ವ್ಯಕ್ತ ಪಡಿಸುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಸಿನಿಮಾದ ಬಗ್ಗೆ ಕೇಂದ್ರದಲ್ಲಿ ಅನೇಕ ಸಂಸ್ಥೆಗಳಿವೆ. ಕೇಂದ್ರದವರು ಮಾಡಿರತಕ್ಕಂಥ ಆ ಸಂಸ್ಥೆಗಳೆಲ್ಲಾ ಇವತ್ತು ಏನಾಗಿದೆ ಎಂದರೆ, Film Finance Corporation ; Films Division, Films and Television Institute, Directorate of Film Festivals, Indian Motion Pictures Corporation, Children's Film Society. ಇವೆಲ್ಲಾ ಬೊಂಬಾಯಿಯಲ್ಲಿ ಇವೆ. ಮತ್ತು ಹೆಚ್ಚು ಕಡಿಮೆ ಹಿಂದೀ ಚಲನ ಚಿತ್ರದವರಿಗೇ ಅವರು ಹೆಚ್ಚು ಪ್ರೋತ್ಸಾಹವನ್ನು ಕೊಡು ತ್ತಿದ್ದಾರೆ. ನಮ್ಮ ರೀಜಿನಲ್ ಫಿಲಂ ಡೆವಲಪ್‌ಮೆಂಟಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿಲ್ಲ. ಆದುದರಿಂದ ನಾವು ಇದಕ್ಕೆ ಸಂಬಂಧಪಟ್ಟ ಹಾಗೆ ಅವರ ಜೊತೆಯಲ್ಲಿ ವ್ಯವಹಾರ ಮಾಡುತ್ತಿದ್ದೇವೆ. ಇವತ್ತು ಇಡೀ ಇಂಡಿಯಾ ದೇಶದಲ್ಲಿಯೇ ರೀಜಿನಲ್ ಸಿನಿಮಾ ಎನ್ನತಕ್ಕಂಥದ್ದು ದೊಡ್ಡ ರೀತಿಯಲ್ಲಿ ಬೆಳೆಯುತ್ತಿದೆ. ಎಫ್.ಎಫ್.ಸಿ.ಯವರು ಒಂದು ವರ್ಷಕ್ಕೆ ೧೧ ಚಿತ್ರಗಳಿಗೆ ಕೇವಲ ೩೫ ಸಾವಿರ ರೂಪಾಯಿಗಳನ್ನು ಸಾಲವಾಗಿ ಅದು ಏನು ಬ್ಯಾಂಕ್‌ನವರಿಗಿಂತ ಸ್ಟ್ರಿಕ್ಟ್ ಆಗಿ ಎಲ್ಲಾ ಬರೆಸಿಕೊಂಡು ಕೊಡುತ್ತಿದ್ದಾರೆ. ಆದರೆ ನಮ್ಮ ಸರ್ಕಾರದವರು ಹತ್ತಿರ ಹತ್ತಿರ ೧ ಕೋಟಿ ರೂ.ಗಳವರೆಗೆ ನಾವು ಸಬ್ಸಿಡಿಗೋಸ್ಕರ ಖರ್ಚು ಮಾಡುತ್ತಿದ್ದಾರೆ. ನಾವು ಚಲನ ಚಿತ್ರಕ್ಕೆ ಏನು ಸಹಾಯ ಕೊಡುತ್ತಿದ್ದೇವೆ ಅದನ್ನು ಬೇರೆ ರಾಜ್ಯ ಗಳವರೂ ಮತ್ತು ಕೇಂದ್ರ ಸರ್ಕಾರದವರು ಕೂಡ ನೋಡಿ ತಮ್ಮ ಒಂದು ರೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕಾದಂಥ ಒಂದು ಉನ್ನತ ಮಟ್ಟದಲ್ಲಿ ನಾವು ಕೆಲಸ ಮಾಡಿ ನಿರ್ವಹಿಸಿದ್ದೇವೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ. ಆದರೆ ಇವತ್ತು ಏನಾಗಿದೆ ಎಂದರೆ ಫಿಲಂ ಡೆವಲಪ್ ಮೆಂಟ್ ಕಾರ್ಪೊರೇಷನ್, ಕಂಠೀರವ ಸ್ಟುಡಿಯೋ ಮತ್ತು ಆದರ್ಶ ಇನ್ಸ್‌ಟಿಟ್ಯೂಟ್‌ನವರ ಟ್ರೈನಿಂಗ್ ಕೊಡತಕ್ಕಂಥ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಹೀಗೆ ನಾನಾ ರೀತಿಯಲ್ಲಿ ಚಟುವಟಿಕೆಗಳು ನಡೆದಿವೆ.

ಅದನ್ನೆಲ್ಲಾ ಒಂದೇ ಒಂದು ಸಂಸೆ ಯಲ್ಲಿ ತರುವುದಕ್ಕೆ ಪ್ರಯತ್ನವನ್ನು ನಾವು ನಡೆಸಿದ್ದೇವೆ. ಹಾಗೆ ತಂದ ಕಾಲಕ್ಕೆ ಅದನ್ನು ನಾವು ಇನ್ನೂ ಸಮರ್ಥವಾದ ರೀತಿಯಲ್ಲಿ ಆ ಕ್ಷೇತ್ರವನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗಬಹುದು. ಪ್ರೊಡಕ್ಷನ್ ಆಫ್ ಡಾಕ್ಯುಮೆಂಟರಿ ಮುಂತಾದ ಕೆಲಸಗಳು ನಮ್ಮಲ್ಲಿ ಆಗುತ್ತವೆ ಆದರೆ ಇನ್ನೂ ಎಷ್ಟೋ ಆಗಬೇಕಾದ ಕೆಲಸಗಳು ಇವೆ. ಆದರೆ ಇದಕ್ಕೆಲ್ಲಾ ದೊಡ್ಡ ತೊಂದರೆ ಬಂದಿರ ತಕ್ಕುದ್ದು ಏನೆಂದರೆ ಇದರ ವೆಚ್ಚ ಬಹಳ ದೊಡ್ಡದಾಗಿದೆ. ಅದಕ್ಕೆ ಏನು ಮಾಡಬೇಕೆಂದು ಹೇಳಿ ಯೋಚಿಸುತ್ತಿದ್ದೇವೆ. ಸುಮ್ಮನೇ ಮಕ್ಕಿಕಾಮಕ್ಕಿ ಮಾಡುವುದರ ಬದಲು ಹೊಸ ರೀತಿಯಲ್ಲಿ ಮಾಡ ಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಈವೊತ್ತು ನಮ್ಮ ರಾಷ್ಟ್ರದ ಚಲನಚಿತ್ರ ಬಹಳ ದೊಡ್ಡದಾಗಿ ಬೆಳೆದಿದೆ ಎಂದು ಹೇಳುತ್ತೇನೆ. ಇದರ ಒಂದು ಅಂಕಿ ಸಂಖ್ಯೆಗಳನ್ನು ತೆಗೆದು ನೋಡಿದರೆ ನಮ್ಮ ಇಂಡಿಯಾ ದೇಶದಲ್ಲಿ ಒಂದು ಸಾವಿರ ಜನಕ್ಕೆ 5 ಸಿನಿಮಾ ಸೀಟುಗಳು ಮಾತ್ರ ಇವೆ. ಅದರಲ್ಲಿ ನಮ್ಮ ಕರ್ನಾಟಕ ತೆಗೆದುಕೊಂಡರೆ ಕೆಲವು ಕಡೆ 15 ಸಾವಿರ ಜನಸಂಖ್ಯೆಗೆ ಒಂದು ಥಿಯೇಟರ್ ಇದೆ. ಇನ್ನೊಂದು ಕಡೆ ಒಂದು ಲಕ್ಷ ಜನಸಂಖ್ಯೆಗೆ ಒಂದು ಥಿಯೇಟರ್ ಇದೆ. ಸುಮಾರು 100ಕ್ಕೆ 80 ರಷ್ಟು ಜನಗಳಿಗೆ ಈ ಒಂದು ಪ್ರಭಲವಾದ ಸೌಲಭ ತಲುಪೇ ಇಲ್ಲ ಎಂದು ಹೇಳಬಹುದು. ಕೇವಲ ಶೇಕಡ 20 ರಷ್ಟು ಜನಕ್ಕೆ ಮಾತ್ರ ಈ ಒಂದು ಸೌಲಭ್ಯ ತಲುಪಿದೆ. ಕೆಂಪೇಗೌಡ ಸರ್ಕಲ್‌ನಲ್ಲಿ ಇರುವಂಥಾ ಚಲನ ಚಿತ್ರಮಂದಿರಗಳಿಗೆ ಮತ್ತು ಸತ್ಯಂ ಶಿವಸುಂದರಂ ಇಂಥಾ ಚಲನ ಚಿತ್ರಮಂದಿರಗಳಿಗೆ ಯಾವರೀತಿಯಲ್ಲೂ ಇದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡು ವುದಕ್ಕೆ ಸಾಧ್ಯವಿಲ್ಲಾ ಇಂಥಾದಕ್ಕೆ ಇನ್‌ವೆಸ್ಟ್ ಮಾಡುತ್ತಾ ಹೋದರೆ ಬಹಳ ಜನರನ್ನು ವಂಚನೆಗೆ ಈಡು ಮಾಡುವ ಅಪಾದನೆಗೆ ಗುರಿಯಾಗಬೇಕಾಗುತ್ತದೆ. ಆದುದರಿಂದ ಈ ಒಂದು ಟೆಕ್ನಾಲಜಿ ಈವೊತ್ತು ಬದಲಾವಣೆಯಾಗಬೇಕಾಗಿದೆ. ಹಂಗೇರಿಯಲ್ಲಿ ಒಂದು ದೊಡ್ಡ ಪ್ರಮಾಣದಲ್ಲಿ 16 ಎಂ. ಎಂ. ನ ಸ್ಕ್ರೀನಿನ ಒಂದು ಸಿನಿಮಾ ವ್ಯವಸ್ಥೆ ಮಾಡಿದ್ದಾರೆ. ಚೈನಾ ದೇಶದಲ್ಲಿ ೬೦ ಸಾವಿರ ಪ್ರೊಜೆಕ್ಷನ್ ಟೀಮ್ಸ್ ಗಳು ಇವೆ, ಅವರು ಮೊಬೈಲ್ ಯೂನಿಟ್ಸ್‌ನಲ್ಲಿ ತೆಗೆದುಕೊಂಡು ಹೋಗುತ್ತಾರೆ. ಅವರು 8.75 ಎಂ. ಎಂ. ಅಳತೆಯುಳ್ಳ ಒಂದು ಸಣ್ಣ ಕ್ಯಾಮರಾದಲ್ಲಿ ಇದನ್ನು ಅಳವಡಿಸಿಕೊಂಡು 12 ತಿಂಗಳ ಕಾಲವೂ ಪ್ರತಿ ಊರಿಗೆ ಹೋಗಿ ಇದನ್ನು ಪ್ರದರ್ಶನ ಮಾಡುತ್ತಾರೆ. ಈ ರೀತಿ ಮಾಡುವುದನ್ನು 16 ಎಂ.ಎಂ. ಟೆಕ್ನಾಲಜಿ ಏನು ಇದೆಯೋ ಅದನ್ನು ನಾವು ಬಳಸಿದ ಪಕ್ಷದಲ್ಲಿ ಅದೇ ಚಿತ್ರವನ್ನು ಬ್ಲೋ ಆಫ್ ಮಾಡಿ ದರೂ ಸಹ ಅರ್ಧಭಾಗದಲ್ಲಿ ಮಾಡುವುದಕ್ಕೆ ಸಾಧ್ಯ ಇಲ್ಲ. ಈವೊತ್ತು ನಮ್ಮಲ್ಲಿ ದೊಡ್ಡ ದೊಡ್ಡ ಕಲಾವಿದರೂ ಮತ್ತು ಸಾಹಿತಿಗಳು ಏನು ಇದ್ದಾರೋ ಅವರ ಒಂದು ಡ್ಯಾಕುಮೆಂಟರಿಯನ್ನಾದರೂ ಬರೇ ರಿಕಾರ್ಡ್‌ನಾದರೂ ಮಾಡಿಟ್ಟಿಕೊಳ್ಳಲಿ ಎಂದು ಆದೇಶ ನೀಡಿದ್ದೇನೆ. ಏತಕ್ಕೆಂದರೆ ಮುಂದೆ ಏನಾದರೂ 16 ಎಂ.ಎಂ. ಬಂದರೆ ಅನುಕೂಲವಾಗಬಹುದು ಅನ್ನುವ ದೃಷ್ಟಿಯಿಂದ ಅವರ ದಾಖಲೆ ಗಳಾದರೂ ಇರಲಿ ಎಂದು ಹೇಳಿದ್ದೇನೆ. ಮುಂದೆ ಈ 16 ಎಂ.ಎಂ. ಟೆಕ್ನಾಲಜಿ ಡೆವಲಪ್ ಆದಾಗ ಇದನ್ನು ಬ್ಲೋಆಪ್ ಮಾಡೋಣ ಎಂದು ಹೇಳಿದ್ದೇನೆ. ಅನ್ನೊಂದು ಸೂಪರ್ 16 ಎಂ.ಎಂ. ಅಲ್ಲಿ ಒಂದು ದೊಡ್ಡ ರೀತಿಯಲ್ಲಿ ಪ್ರದರ್ಶನ ಮಾಡಬಹುದು. ಇದು ಆಧುನಿಕ ರೀತಿಯಲ್ಲಿ ಇದೆ. ಅದು ಬಹು ದೊಡ್ಡ ಜನಸಂಖ್ಯೆ ಇರತಕ್ಕಂಥಾ ಸ್ಥಳಕ್ಕೆ ಹೊಂದಿಕೊಂಡಂತೆ ಈ ಒಂದು ಟೆಕ್ನಾಲಜಿ ಇದೆ ಅದು ದೇಶದ ಎಲ್ಲಾ ಕಡೆಯಲ್ಲೂ ಹೊರಡಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಮುಂದೆ ಪ್ರಸ್ತಾಪ ಮಾಡುತ್ತೇನೆ.

ಇನ್ನು ಈ ಬೇಡಿಕೆ ಬಗ್ಗೆ ವಿಶೇಷವಾಗಿ ಹೇಳಬೇಕಾದದ್ದು ಏನು ಇಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ. ಮತ್ತು ಅನೇಕ ಸದಸ್ಯರುಗಳು ಈ ಇಲಾಖೆಗಳ ಬೇಡಿಕೆ ಬಗ್ಗೆ ಏನು ಲೋಪದೋಷ ಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದನ್ನು ನನ್ನ ಉತ್ತರದಲ್ಲಿ ಪ್ರಸ್ತಾಪ ಮಾಡದೇ ಇದ್ದರೂ ಕೂಡ ಆ ಲೋಪದೋಷಗಳನ್ನೆಲ್ಲಾ ನಾನು ಒಂದು ನೋಟ್ ಮಾಡಿಟ್ಟುಕೊಂಡಿದ್ದೇನೆ. ಅದರ ಬಗ್ಗೆ ಎಷ್ಟು ಸರಿಪಡಿಸುವುದಕ್ಕೆ ಸಾಧ್ಯವೋ ಅಷ್ಟನ್ನು ನಾನು ನನ್ನ ಶಕ್ತಿ ಮೀರಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡು ತ್ತೇನೆ. ಮತ್ತು ಈಗಾಗಲೇ ಅನೇಕ ಕಾರ್ಯ ಕ್ರಮಗಳನ್ನು ಕೈಗೊಳ್ಳೋಣ ಎಂದು ಮಾಡಿದ್ದ ಆದರೆ ಈ ಸದನದ ಒಂದು ಸದಸ್ಯರ ಅಭಿಪ್ರಾಯವನ್ನು ಸಹ ತೆಗೆದುಕೊಂಡು ಮಾಡಿದರೆ ಇನ್ನೂ ಹೆಚ್ಚಿನ ಒಂದು ಪ್ರಯೋಜನವಾದೀತು ಅನ್ನುವ ಒಂದು ದೃಷ್ಟಿಯಿಂದ ಇದನ್ನು ತಡೆ ಹಿಡಿದಿದ್ದೇನೆ. ಇದನ್ನು ಒಳ್ಳೆಯ ರೀತಿಯಲ್ಲಿ ಗ್ರಹಿಸುತ್ತೀರಿ ಅಂತ ನಾನು ನಂಬಿಕೊಂಡಿದ್ದೇನೆ.

ಇನ್ನು ಈ ಇಲಾಖೆ ಬೇಡಿಕೆ ಬಗ್ಗೆ ಶ್ರೀ ಶಾಮಣ್ಣನವರು ಕೆಲವು ಕಟ್ ಮೋಷನ್ಸ್‌ಗಳನ್ನು ಕಳುಹಿಸಿದ್ದಾರೆ. ಹಾಗೆ ಕಟ್ ಮೋಷನ್ ಕಳುಹಿಸಿದ ಮಾತ್ರಕ್ಕೆ ಲೋಪದೋಷಗಳು ಸರಿಹೋಗುವುದಿಲ್ಲ. ಈ ಬಗ್ಗೆ ಒಂದು ಹಣದ ಪೂರೈಕೆಗೆ ಏನು ಬೇಕೋ ಅದನ್ನು ಸರಿಪಡಿಸಬೇಕಾಗುತ್ತದೆ. ಆದುದರಿಂದ ಮಾನ್ಯ ಶಾಮಣ್ಣನವರು ಈ ಕಟ್ ಮೋಷನ್ಸ್ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ ಎಂದು ಆಶೆ ಇಟ್ಟುಕೊಂಡಿದ್ದೇನೆ.

ಇನ್ನು ನಮ್ಮ ಇಲಾಖೆಗೆ ಇನ್ನು ಜಾಸ್ತಿ ಹಣ ಕೊಡಬೇಕೆಂದು ಹೇಳುವುದಕ್ಕೆ ಸಾಧ್ಯ ಇಲ್ಲ. ಇದಕ್ಕೆ ಹಣ ಕಡಿಮೆ ಇದ್ದರೂ ಕೂಡ ಈ ಇಲಾಖೆಯು ಕೆಲಸಕಾರ್ಯಗಳನ್ನು ಸಮರ್ಪಕವಾಗಿ ರೀತಿಯಲ್ಲಿ ಮಾಡಿಕೊಂಡು ಹೋಗಬೇಕು ಅಂತ ನಮ್ಮ ಇಲಾಖಾ ಅಧಿಕಾರಿಗಳಿಗೆ ಒಂದು ಸೂಚನೆಯನ್ನು ಕೊಡಲು ಬಯಸುತ್ತೇನೆ.

ಇನ್ನು ಈ ಬಗ್ಗೆ ಸಲಹಾ ಸಮಿತಿಗಳನ್ನು ಮಾಡಿದಾಗ ತಮ್ಮೆಲ್ಲರ ಚಿಂತನೆತನಗಳನ್ನು ತೆಗೆದುಕೊಂಡು ಕೆಲಸ ಮಾಡಿದರೆ ಇದರಿಂದ ಇನ್ನೂ ಹೆಚ್ಚಿನ ಪ್ರಯೋಜನ ಸಿಗುತ್ತದೆ ಅನ್ನುವ ಆಶೆ ಇಟ್ಟುಕೊಂಡಿದ್ದೇನೆ ಮತ್ತು ತಮ್ಮ ಒಂದು ಸಲಹೆ ಮೇರೆಗೆ ಈ ಇಲಾಖೆಯು ಪ್ರಾಮಾಣಿಕವಾದ ಸೇವೆಯನ್ನು ಸಲ್ಲಿಸುವ ಪ್ರಯತ್ನ ಮಾಡಬಹುದು ಅನ್ನುವ ಒಂದು ಆಶೆ ಇಟ್ಟುಕೊಂಡಿದ್ದೇನೆ. ಈ ಒಂದು ಕಾರಣದಿಂದ ತಾವೆಲ್ಲರೂ ಈ ಒಂದು ಇಲಾಖೆಯ ಬೇಡಿಕೆ ಬಗ್ಗೆ ಬೇಕಾದಂಥಾ ಹಣವನ್ನು ಮಂಜೂರು ಮಾಡಿಕೊಡಬೇಕೆಂದು ಪ್ರಾರ್ಥನೆ ಸಲ್ಲಿಸಿ ನನ್ನ ಉತ್ತರವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ತಮ್ಮ ಒಂದು ಇಲಾಖೆ ಏನು ಇದೆ ವಾರ್ತಾ ಇಲಾಖೆ ಬಹಳ ಮುಖ್ಯವಾದುದು. ಕಾರಣ ಸರ್ಕಾರದ ಮಟ್ಟದಲ್ಲಿ ಇರತಕ್ಕಂಥಾ ಕೆಲಸ ಕಾರ್ಯಗಳು ಮತ್ತು ಅಧಿವೇಶನದಲ್ಲಿ ನಡೆಯುವಂಥಾ ಕೆಲಸ ಕಾರ್ಯಗಳು ಈವೊತ್ತು ಶ್ರೀಸಾಮಾನ್ಯನಿಗೆ ಅರಿವು ಅಗುವುದಿಲ್ಲ. ಪತ್ರಿಕೆಗಳ ಮೂಲಕ ತಿಳಿದುಕೊಳ್ಳುವಂಥಾ ಜನರು ಕೇವಲ 3–4 ಪರ್ಸೆಂಟ್ ನಷ್ಟು ಇರಬಹುದು. ಆದುದರಿಂದ ತಮ್ಮ ಒಂದು ವಾರ್ತಾ ಇಲಾಖಾ ಮುಖಾಂತರ ಒಂದು ಸಾಕ್ಷ್ಯ ಚಿತ್ರವನ್ನು ಹಳ್ಳಿ ಹಳ್ಳಿಯಲ್ಲಿ ಪ್ರದರ್ಶನ ಮಾಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅದನ್ನು ಡೆವಲಪ್ ಮಾಡುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ ?

ಎರಡನೆಯದಾಗಿ ಈ ಫ್ಲೈಯಿಂಗ್ ಸ್ಕ್ವಾಡ್‌ನಲ್ಲಿ ಹಳ್ಳಿಗಾಡಿನಲ್ಲಿರತಕ್ಕಂಥಾವರಿಗೆ ಎಷ್ಟು ಜನಕ್ಕೆ ಟ್ರೈನಿಂಗ್ ಕೊಟ್ಟಿದ್ದೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸಾಕ್ಷ್ಯ ಚಿತ್ರದ ಬಗ್ಗೆ ಹೇಳುವುದಾದರೆ ಅದು ಸಾಕ್ಷ್ಯ ಚಿತ್ರ ಮಾತ್ರ ತಯಾರಾಗುತ್ತದೇ ವಿನಾ ಬೇರೆ ಇನ್ನಾವುದಕ್ಕೂ ಇದನ್ನು ಉಪಯೋಗ ಮಾಡುತ್ತಾ ಇಲ್ಲಾ. ತಾವು ಹೇಳಿದ ರೀತಿ ಮಾಡಬೇಕಾದರೆ ಅದರ ಬಗ್ಗೆ ಯೋಚನೆ ಮಾಡಬೇಕಾಗಿದೆ.

ಇನ್ನು ಫ್ಲೈಯಿಂಗ್ ಸ್ಕ್ವಾಡ್‌ನಲ್ಲಿ ಎಷ್ಟು ಜನರಿಗೆ ಟ್ರೈನಿಂಗ್ ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ. 1976ರಲ್ಲಿ 25 ಜನರು ಹವ್ಯಾಸಿಕ ತರಬೇತಿಯನ್ನು ಹೊಂದಿದ್ದಾರೆ. ಹಾಬಿ ಲೈಸನ್ಸ್, ಪೈಲಟ್ ಲೈಸನ್ಸ್, ಮತ್ತು ಕಮರ್ಷಿಯಲ್ ಪೈಲಟ್ ಲೈಸನ್ಸ್‌ಗೆ ಬೇಕಾದಷ್ಟು ಜನರಿಗೆ ಶಿಕ್ಷಣವನ್ನು ಒದಗಿಸಿ ಕೊಟ್ಟಿದ್ದೇವೆ. ಕಮರ್ಷಿಯಲ್ ಪೈಲೆಟ್ ಲೈಸನ್ಸ್‌ನಲ್ಲಿ ತರಬೇತಿ ಹೊಂದಿದ ಜನರು 1976–77 ರಲ್ಲಿ 17 ಜನರು, 1978–79 ರಲ್ಲಿ 19 ಜನರು ಇದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಇದು ಬೇಕು ಅಂತ ಹೇಳಿದರೆ ಮಾನ್ಯ ಸದಸ್ಯರಿಗೆ ಒದಗಿಸಿ ಕೊಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್.—ಸ್ವಾಮಿ. ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ಇರತಕಂಥಾ ಕಲ್ಯಾಣ ನಿಧಿಯಲ್ಲಿ ಲಕ್ಷಾಂತರ ರೂಪಾಯಿಯನ್ನು ಯುವಕ ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಅದನ ಅವರು ಯಾವ ರೀತಿ ಖರ್ಚು ಮಾಡಿದ್ದಾರೆ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯ ಇಲ್ಲಾ, ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಾ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಹೇಳಿದ್ದು ಈ ಬಗ್ಗೆ ಏನಾದರೂ ಒಂದು ನಿರ್ಧಿಷ್ಟವಾಗಿ ಆಪಾದನೆ ಮಾಡಿದ್ದಾರೆ ಅದನ್ನು ವಿಮರ್ಶೆ ಮಾಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಎಂ. ಶ್ರೀನಿವಾಸ್. —ಈ ಚುನಾವಣಾ ಸಮಯದಲ್ಲಿ 5 ಸಾವಿರ ರೂಪಾಯಿನಿಂದ 15 ಸಾವಿರ ರೂಪಾಯಿನ ವರೆಗೂ ಕೊಟ್ಟಿದ್ದಾರೆ. ಈ ಕಲ್ಯಾಣ ನಿಧಿಯಲ್ಲಿ 18 ಲಕ್ಷ ರೂಪಾಯಿ ಇತ್ತು, ಇಷ್ಟು ದುಡ್ಡನ್ನು ಯಾವ ಯುವಕ ಸಂಸ್ಥೆಗೆ ಕೊಟ್ಟಿದೆ ಮತ್ತು ಅದು ಖರ್ಚು ಮಾಡಿದ್ದರ ಬಗ್ಗೆ ಪರಿಶೀಲಿಸಬೇಕೆಂದು ನಾನು ಈ ಸದನಕ್ಕೆ ಒಂದು ರಿಪೋರ್ಟ್ ಕೂಡ ಮಾಡಿದ್ದೇನೆ, ಆ ಬಗ್ಗೆ ಏನು ಹೇಳುತ್ತೀರಾ ?

ಇನ್ನು ಎರಡನೆಯದಾಗಿ ಸ್ಟ್ಯಾಂಡರ್ಡ್ ಗೇಮ್ಸ್ ಬಗ್ಗೆ ನಿಮ್ಮ ಅಭಿಪ್ರಾಯ ಕೊಟ್ಟಿದ್ದೀರಿ. ಈ ಸ್ಟ್ಯಾಂಡರ್ಡ್ ಗೇಮ್ಸ್ ನಮ್ಮ ಕರ್ನಾಟಕದಲ್ಲಿ ಕ್ರೀಡಾ ಯಾವ ಒಂದು ಮಟ್ಟದಲ್ಲಿ ಇಳಿಯಬೇಕಾಗಿತ್ತೋ ಆ ಮಟ್ಟದಲ್ಲಿ ಇಳಿದಿಲ್ಲ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಹಿಂದೆ ನಮ್ಮ ಕರ್ನಾಟಕದ ಟೀಮ್ ಆಲ್ ಇಂಡಿಯಾ ಲೆವಲ್‌ನಲ್ಲಿ ಚಾಂಪಿಯನ್‌ಷಿಪ್ ಹೊಡೆದಿದೆ, ಬ್ಯಾಸ್ಕೆಟ್ ಬಾಲ್‌ನಲ್ಲಿ, ವಿಮೆನ್ಸ್ ಹಾಕಿ ಇವು ಸೆಮಿ ಫೈನಲ್‌ನಲ್ಲಿ ಚಾಂಪಿಯನ್‌ಷಿಪ್ ಪಡೆದಿದ್ದಾರೆ. ಈವೊತ್ತು ಕೂಡ ಆರೀತಿ ಒಂದು ಸ್ಪಿರಿಟ್ ಬರುವಂತೆ ಕೆಲಸ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಮೂರನೆಯದಾಗಿ ಈ ಸಬ್ಸಿಡಿ ಕೊಡುವ ಬಗ್ಗೆ ನನಗೇನೂ ವಿರೋದ ಇಲ್ಲಾ. ಈ ಸಬ್ಸಿಡಿಯನ್ನು ದುರುಪಯೋಗ ಮಾಡತಕ್ಕಂಥಾ ಅವಕಾಶ ಜಾಸ್ತಿಯಾಗಿದೆ ಎಂದು ಹೇಳುತ್ತೇನೆ. ಈ ಚಲನ ಚಿತ್ರಗಳಿಗೆ ಹಿಂದು ಉತ್ತೇಜನ ಕೊಡುವುದಕ್ಕೋಸ್ಕರವಾಗಿ ಈ ಒಂದು ಸಬ್ಸಿಡಿಯನ್ನು ತಂದಿದ್ದೀರಿ. ಆದರೆ ಈಗ ಕೆಲವೊಂದು ಚಿತ್ರಗಳಿಗೆ ಸಬ್ಸಿಡಿ ಕೊಡುವುದು ಮತ್ತು ಕೆಲವೊಂದು ಚಿತ್ರಗಳಿಗೆ ಎಂಟರ್‌ಟೈನ್‌ಮೆಂಟ್‌ಟ್ಯಾಕ್ಸ್ ಏನು ಎಕ್ಸೆಮ್ಟ್ ಮಾಡಿದ್ದೀರಿ ಅದೇ ರೀತಿ ಎಲ್ಲಾ ಚಿತ್ರಗಳಿಗೂ ಕೂಡ ಮಾಡಿದರೆ ಯಾವ ಲೋಪ ದೋಷವೂ ಬರುವುದಿಲ್ಲ ಎಂದು ಹೇಳುತ್ತೇನೆ. ಇದರ ಬಗ್ಗೆ ಏನು ಹೇಳುತ್ತೀರಾ ?

ಶ್ರೀ ಕೆ, ಎಚ್. ಶ್ರೀನಿವಾಸ್.— ಮಂಡ್ಯ ಸಕ್ಕರೆ ಕಾರ್ಖಾನೆಯಿಂದ ಹಣವನ್ನು ಪಡೆದುಕೊಂಡಿರುವ ಯುವಕ ಸಂಘಗಳ ಬಗ್ಗೆ ನಾವು ಪರಿಶೀಲನೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಒಂದು ವೇಳೆ ದೊಡ್ಡ ಪ್ರಮಾಣದಲ್ಲಿ ಹಣ ದುರುಪಯೋಗವಾಗಿದ್ದರೆ ಆ ಬಗ್ಗೆ ನಿರ್ದಿಷ್ಟ ಆಪಾದನೆಗಳನ್ನು ಮಾಡಿದರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆಂದು ಸ್ಪಷ್ಟಪಡಿಸಿದ್ದೇನೆ. ಇನ್ನು ಕ್ರೀಡಾಮಟ್ಟವನ್ನು, ಚಾಂಪಿಯನ್‌ಷಿಪ್ ಗೆದ್ದರು–ಸೋತರು ಎನ್ನುವ ಆಧಾರದ ಮೇಲೆ ಅಳೆಯುವುದು ಬೇಡ. ಆದರೆ, ಅಳತೆಯೇ ಬೇಡವೆಂದು ನಾನು ಹೇಳುವುದಿಲ್ಲ. ಇದನ್ನೇ ದೊಡ್ಡದನ್ನಾಗಿ ಮಾಡಿಕೊಂಡು ಆಟಗಾರರನ್ನು ನಿರುತ್ಸಾಹಕ್ಕೊಳಪಡಿಸುವುದು ಬೇಡವೆಂದು ನಾನು ಹೇಳಬಯಸುತ್ತೇನೆ. ನಂತರ, ಎಲ್ಲ ಕನ್ನಡ ಚಲನ ಚಿತ್ರಗಳಗೂ ತೆರಿಗೆಯಿಂದ ವಿನಾಯಿತಿ ನೀಡಿದರೆ ಯಾವುದು ಜಾಸ್ತಿ ದಿನ ನಡೆಯುತ್ತದೆ ಅದರ ನಿರ್ಮಾಪಕರಿಗೆ ಹೆಚ್ಚು ಲಾಭವಾಗುತ್ತದೆಯೇ ಹೊರತು ಮಾರುಕಟ್ಟೆಯನ್ನು ಎದುರಿಸುವುದಕ್ಕೆ ಸಾಧ್ಯವಿಲ್ಲದ ಸ್ವರೂಪದ ಕಲಾತ್ಮಕ ಚಿತ್ರಗಳಿಗೆ ಅನುಕೂಲವಾಗುವುದಿಲ್ಲ. ಉದಾಹರಣೆಗೆ ಶಂಕರ್ ಗುರು ಚಿತ್ರ. ಬಹಳ ದಿವಸಗಳಿಂದ ನಡೆಯುತ್ತದೆ. ಆದುದರಿಂದ, ಇದನ್ನೆಲ್ಲ ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬರಲಾಗಿದೆ. ಇನ್ನು ಸಬ್ಸಿಡಿಯಾಗಿ ಕೊಡುವ ಹಣವು ದುರುಪಯೋಗವಾಗದ ರೀತಿಯಲ್ಲಿ ಮಾಡುವುದಕ್ಕೆ ಕೆಲವು ನಿಯಮಗಳನ್ನು ಸೇರಿಸಿ, ಈ ಬಗ್ಗೆ ಒಂದು ಯೋಗ್ಯ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರ ಗಮನ ಹರಿಸುತ್ತದೆ.

ಶ್ರೀ ಮಳ್ಳೂರು ಆನಂದರಾವ್.—ಸಣ್ಣ ಪ್ರಮಾಣದ ಪತ್ರಿಕೆಗಳು ಪತ್ರಿಕಾ ರಂಗಕ್ಕೆ ಮತ್ತು ಸಾರ್ವಜನಿಕ ಜೀವನಕ್ಕೆ ಯಾವ ಸೇವೆ ಸಲ್ಲಿಸಿವೆ ಎಂಬ ಬಗ್ಗೆ ಸಮಗ್ರ ಸಮೀಕ್ಷೆ ನಡೆಸಿದರೆ ಸ್ವಾರಸ್ಯಕರವಾದ ವಿಚಾರಗಳು ಬೆಳಕಿಗೆ ಬರುತ್ತದೆಂಬ ವಿಚಾರವನ್ನು ನಾನು ಹೇಳಿದ್ದೆ. ಸಮಗ್ರ ಸಮೀಕ್ಷೆ ನಡೆಸುವ ಬಗ್ಗೆ ಮಾನ್ಯ ಮಂತ್ರಿಗಳು ನಮ್ಮ ಉತ್ತರದಲ್ಲಿ ಏನನ್ನೂ ತಿಳಿಸಲಿಲ್ಲ; ಆ ಬಗ್ಗೆ ಅವರು ತಿಳಿಸಬೇಕು ಮತ್ತು ಸಣ್ಣ ಪತ್ರಿಕೆಗಳಿಗೆ ಜಾಹಿರಾತು ನೀಡುವ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಆ ಬಗ್ಗೆ ಮಾನ್ಯ ಸಚಿವರು ಹೇಳಿದ ಉತ್ತರ ನನಗೆ ತೃಪ್ತಿಯಾಗಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಉತ್ತರಗಳಿಂದ ನಿಮ್ಮನ್ನು ತೃಪ್ತಿಪಡಿಸುವುದಕ್ಕಾಗುವುದಿಲ್ಲ; ಕೃತಿಯಲ್ಲಿ ತೃಪ್ತಿಪಡಿಸುತ್ತೇವೆ.

ಶ್ರೀ ಮಳ್ಳೂರು ಆನಂದರಾವ್.—ನಮಗೆ ಉತ್ತರಗಳಿಂದಲೂ ತೃಪ್ತಿಯಾಗುತ್ತದೆ; ತೃಪ್ತಿಯಾದಾಗ ಮೇಜು ಕುಟ್ಟಿ ತಮ್ಮ ಹೇಳಿಕೆಯನ್ನು ಸ್ವಾಗತ ಮಾಡುತ್ತೇವೆ. ಜಾಹಿರಾತುಗಳನ್ನು ನೀಡುವ ವಿಚಾರದಲ್ಲಿ ಒಂದು ಮಾರ್ಗ ಸೂಚಿಯನ್ನಿಟ್ಟುಕೊಳ್ಳಲಾಗುವುದೆ ಅಥವಾ ಈ ಬಗ್ಗೆ ಒಂದು ತಜ್ಞರ ಖಾಯಂ ಸಮಿತಿಯನ್ನು ನೇಮಕ ಮಾಡಲಾಗುವುದೆ? ಸಣ್ಣ ಪತ್ರಿಕೆಗಳಿಗೆ ಒಂದು ಸಂಘವಿಲ್ಲ, ಬೇರೆ ಬೇರೆ ಸಂಘಗಳಿವೆ. ಅವರನ್ನು ಒಂದೇ ವೇದಿಕೆ ಮೇಲೆ ತಂದು ಅವರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ವಿಚಾರ ಮಾಡಬೇಕು. ಇಲ್ಲದಿದ್ದರೆ, ಸರ್ಕಾರದವರೇ, ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಅವರನ್ನು ಎಕ್ಸ್-ಅಫಿಷಿಯೋ ಚೇರ್ಮನ್ ಆಗುಳ್ಳ ಸಮಿತಿಯೊಂದನ್ನು ಮಾಡಿ; ಅವರು ಪತ್ರಿಕೆ ಸರಿಯಾದ ಕಾಲಕ್ಕೆ ಹೊರಡುತ್ತಿದೆಯೆ? ಪತ್ರಿಕೆಯು ಸಂಖ್ಯೆಯನ್ನು ಸರಿಯಾಗಿ ಕಾಪಾಡಿಕೊಂಡು ಬರುತ್ತಿದ್ದಾರೆಯೇ ಎಂಬುದನ್ನೆಲ್ಲಾ ತನಿಖೆ ಮಾಡಿ, ಆ ಆಧಾರದ ಮೇಲೆ ಜಾಹಿರಾತುಗಳನ್ನು ನೀಡಲಿ. ಈ ಪತ್ರಿಕೆಗಳನ್ನು ಶಾಲಾ ಕಾಲೇಜುಗಳಿಗೆ ಮತ್ತು ಗ್ರಂಥಾಲಯಗಳಿಗೆ ವಿತರಣೆ ಮಾಡಲು ಸಹಾಯವಾಗುವ ದೃಷ್ಟಿಯಿಂದ ಸರ್ಕಾರದವರೇ ಈ ಕೆಲಸವನ್ನು ಏತಕ್ಕೆ ಪ್ರಾರಂಭಿಸಬಾರದು? ಇನ್ನು ರಾಜ್ಯದಲ್ಲಿ ಒಟ್ಟು ಒಂಬತ್ತು ಸಾವಿರ ಯುವಕ ಸಂಘಗಳಿವೆ. ಈ ಸಂಘಗಳ ಸ್ಥಿತಿಗಳೇನು? ಈ ಸಂಘಗಳ ಚಟುವಟಿಕೆಗಳೇನು ಎನ್ನುವುದರ ಬಗ್ಗೆ ಸಮೀಕ್ಷೆ ಮಾಡಲಾಗಿದೆಯೆ? ಯುವಕ ಸಂಘಗಳು ಸ್ಥಳೀಯವಾಗಿ ಪ್ರಮುಖ ಪಾತ್ರವನ್ನು ವಹಿಸುತ್ತವೆ, ಈ ಸಂಘಗಳಿಗೆ ಮಾನ್ಯತೆ ಕೊಡುವಾಗ ಅದರಲ್ಲಿ ಹರಿಜನರಿಗೆ ಪ್ರಾತಿನಿಧ್ಯ ಕೊಡಲಾಗಿದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು. ಏಕೆಂದರೆ, ಗ್ರಾಮಾಂತರ ಪ್ರದೇಶದಲ್ಲಿ ಇವರೆಲ್ಲಾ ಒಟ್ಟಿಗೆ ಸೇರಿಕೊಂಡರೆ ಗ್ರಾಮ ಜೀವನದಲ್ಲಿ ಅವರು ಬೆರೆಯುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, ಹರಿಜನರಿಗೆ ಪ್ರಾತಿನಿಧ್ಯವಿಲ್ಲದ ಯುವಕ ಸಂಘಗಳಿಗೆ ಮಾನ್ಯತೆ ಕೊಡುವುದಿಲ್ಲವೆಂದು ಸರ್ಕಾರದವರು ಒಂದು ನಿಯಮ ಮಾಡಬೇಕು. ಇನ್ನು ಗುಣಮಟ್ಟವನ್ನು ಆಧಾರವಾಗಿ ಇಟ್ಟುಕೊಳ್ಳದೆ ಸಬ್ಸಿಡಿಯನ್ನು ಕೊಡಲಾಗುವುದೆಂದು ಮಾನ್ಯ ಸಚಿವರು ತಿಳಿಸಿದರು. ಕೆಳಮಟ್ಟದ ಸಿನಿಮಾಗಳು ಮಕ್ಕಳ, ವಿದ್ಯಾರ್ಥಿಗಳ ಹಾಗೂ ಸಂಸಾರಸ್ಥರ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾಡುತ್ತವೆ. ಅದನ್ನು ತಡೆಗಟ್ಟುವುದು ಸರ್ಕಾರದ ಸಮಾಜಿಕ ಹೊಣೆಯಾಗಿದೆ. ಗುಣಮಟ್ಟವನ್ನು ಆಧಾರವಾಗಿಟ್ಟುಕೊಳ್ಳುವುದಿಲ್ಲ ಎಂದು ಹೇಳುವುದಾದರೆ, ಬ್ಲಾಂಕ್ ಆಗಿ ೫೦-೬೦ ಸಾವಿರ ರೂಪಾಯಿ ಕೊಟ್ಟುಬಿಡಿ. ಆದರೆ, ಉತ್ತಮ ಗುಣಮಟ್ಟದ ಸಿನಿಮಾಗಳನ್ನು ತಯಾರಿಸಿದವರಿಗೆ ಒಂದು-ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಡುವ ಹಾಗೆ ವ್ಯವಸ್ಥೆ ಮಾಡಿ ಇದಕ್ಕೊಂದು ತಜ್ಞರ ಸಮಿತಿಯನ್ನು ನೇಮಿಸಿ. ಏನೇ ಆದರೂ ಗುಣಮಟ್ಟವನ್ನು ಕಡ್ಡಾಯವಾಗಿ ಆಧಾರವಾಗಿಟ್ಟುಕೊಳ್ಳಬೇಕೆಂಬುದು ನನ್ನ ವಾದ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸನ್ಮಾನ್ಯ ಸದಸ್ಯರು ಮಾಡಿದ ಎಲ್ಲ ಸಲಹೆಗಳ ಬಗ್ಗೆ ನಾನು ಆಲೋಚನೆ ಮಾಡುತ್ತೇನೆ. ಆದರೂ, ಅವರ ಒಂದೆರಡು ಸಲಹೆಗಳಿಗೆ ನಾನು ನಿರ್ದಿಷ್ಟ ಉತ್ತರವನ್ನು ಕೊಡಬಯಸುತ್ತೇನೆ. ಯುವಕ ಸಂಘಗಳಲ್ಲಿ ಹರಿಜನರಿಗೆ ಪ್ರಾತಿನಿಧ್ಯ ಕಡ್ಡಾಯವಾಗಿ ಕೊಡಬೇಕೆಂಬುದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದು. ಸಬ್ಸಿಡಿ ವಿಚಾರವಾಗಿ ಮಾನ್ಯ ಸದಸ್ಯರು ಮಾಡಿದಂತಹ ಆಲೋಚನೆಯನ್ನೇ ಸರ್ಕಾರ ಮಾಡಿದಾಗ, ಚಿತ್ರ ವಲಯಗಳಿಂದ ಅದಕ್ಕೆ ತದ್ವಿರುದ್ಧವಾಗಿ ಅಭಿಪ್ರಾಯಗಳು ಬಂದಿದೆ. ಇನ್ನು ಚಲನಚಿತ್ರಗಳು ಕೆಟ್ಟ ಪರಿಣಾಮ ಬೀರುವ ಬಗ್ಗೆ ಸೆನ್ಸಾರ್‌ನವರು ಗಮನ ಕೊಡಬೇಕಾಗಿದೆ.

ಶ್ರೀ ಮಳ್ಳೂರು ಆನಂದರಾವ್.—ಸತ್ಯಂ ಶಿವಂ ಸುಂದರಂ ಚಿತ್ರ ಕೂಡ ಸೆನ್ಸಾರ್ ಇಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಬೆಂಗಳೂರು ನಗರದಲ್ಲಿ ಒಂದು ಪ್ರಾದೇಶಿಕ ಸೆನ್ಸಾರ್ ಕಛೇರಿ ಆಗುವುದಿದೆ; ಅದು ಬಹು ಬೇಗನೇ ಆಗಬಹುದೆಂಬ ನಿರೀಕ್ಷೆಯನ್ನು ನಾವಿಟ್ಟುಕೊಂಡಿದ್ದೇವೆ. ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುವ ಚಲನಚಿತ್ರಗಳ ತಯಾರಿಗೆ ದುರದೃಷ್ಟ. ಮಕ್ಕಳ ಮನೋವಿಕಾಸಕ್ಕೆ ಸಹಾಯವಾಗುವ ಚಲನಚಿತ್ರಗಳು ನಮ್ಮ ರಾಜ್ಯದಲ್ಲಿ ತಯಾರಾಗುತ್ತಾ ಇಲ್ಲ. ಎಲ್ಲೋ ಒಂದು ಚಿಲ್ಡ್ರನ್ ಫಿಲಂ ಸೊಸೈಟಿ ಎಂದು ಇದೆ. ಅದರಲ್ಲಿ ಮೂರು—ನಾಲ್ಕು ಚಲನ ಚಿತ್ರಗಳನ್ನು ಹಿಂದಿಯಲ್ಲಿ ತೆಗೆಯುತ್ತಾರೆ, ಆಮೇಲೆ ಅದನ್ನು ಡಬ್ ಮಾಡುತ್ತಾರೆ. ಮಕ್ಕಳ ಮನೋವಿಕಾಸ ಮತ್ತು ಅವರ ಶಿಕ್ಷಣಕ್ಕೆ ಕೊಡುವ ಚಲನಚಿತ್ರಗಳ ತಯಾರಿಕೆಗೆ ಪ್ರೋತ್ಸಾಹ ನೀಡಲು ಸಬ್ಸಿಡಿ ಕೊಡಬೇಕು ಮತ್ತು ಹಾಗೆ ಮಾಡಲು ಸಬ್ಸಿಡಿ ನಿಯಮಾಳಿಯಲ್ಲಿ ತಿದ್ದುಪಡಿಯಾಗಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ.

ಶ್ರೀ ಎಸ್. ಎಸ್. ಅರಕೇರಿ.- ವಿಜಾಪುರ ಸ್ಟೇಡಿಯಂ ಇನ್ನೂ ಪೂರ್ಣಗೊಂಡಿಲ್ಲ, ಅದರ ಒಟ್ಟು ಅಂದಾಜು ವೆಚ್ಚ ವೆಷ್ಟು? ಡಾ॥ ಲೋಹಿಯಾ ಮತ್ತು ಡಾ॥ ಅಂಬೇಡ್ಕರ್ ಅವರ ಭವನಗಳ ಬಗ್ಗೆ ನಾನು ನನ್ನ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೆ. ಮಾನ್ಯ ಸಚಿವರಿಂದ ನನ್ನ ಪ್ರಸ್ತಾಪಕ್ಕೆ ಉತ್ತರ ಬಯಸುತ್ತೇನೆ.

ಶ್ರೀ ಕೆ. ಹೆಚ್ ಶ್ರೀನಿವಾಸ್.—ವಿಜಾಪುರ ಸ್ಟೇಡಿಯಂ ತೀವ್ರಗತಿಯಲ್ಲಿ ನಿರ್ಮಾಣವಾಗುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸೂಚನೆ ಕೊಡುತ್ತೇನೆ. ಆದರೆ, ಅದರ ಬಗ್ಗೆ ವಿವರಗಳು ಬೇಕಾದರೆ ನಾನು ತಮಗೆ ನಿಧಾನವಾಗಿ ಒದಗಿಸುತ್ತೇನೆ. ಡಾ॥ ಲೋಹಿಯಾ ಮತ್ತು ಡಾ॥ ಅಂಬೇಡ್ಕರ್ ಸ್ಮಾರಕ ಭವನಗಳನ್ನು ನಿರ್ಮಿಸಲು ನಾವು ಹೋಗಿಲ್ಲ. ಕೇಂದ್ರ ಸರ್ಕಾರದವರು ಮೂರೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟು ಗುರುನಾನಕ್ ಅವರ ಹೆಸರಿನಲ್ಲಿ ಏನಾದರೂ ಮಾಡುವುದಕ್ಕೆ ತಯಾರಿದ್ದೀರಾ ಎಂದು ಸರ್ಕಾರವನ್ನು ಕೇಳಿದಾಗ, ಅದನ್ನು ಯುವಜನ ಖಾತೆಗೆ ಸೇರಿಸಿಕೊಂಡು ಗುರುನಾನಕ್ ಭವನವನ್ನು ಕಟ್ಟಿಸಲಾಯಿತು. ಹಾಗೆಯೇ, ಡಾ॥ ಲೋಹಿಯಾ ಮತ್ತು ಡಾ॥ ಅಂಬೇಡ್ಕರ್ ಸ್ಮಾರಕ ಭವನಗಳಿಗಾಗಿ ಕೇಂದ್ರದಿಂದ ನೀವು ಹಣ ತರಿಸಿಕೊಡಿ, ನಾವು ಕಟ್ಟುತ್ತೇವೆ. ಇನ್ನು ಅಂಬೇಡ್ಕರ್ ಅವರ ಸ್ಮರಣಾರ್ಥ ಕಬಡಿ ಟೂರ್ನಮೆಂಟನ್ನು ವಿಜಾಪುರದಲ್ಲಿ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.

ಶ್ರೀ ಸಿ. ಎಂ. ಇಬ್ರಾಹಿಂ.—ಸುಮಾರು ೨೫ ವರ್ಷಗಳ ಕಾಲ ಪತ್ರಿಕಾ ರಂಗದಲ್ಲಿ ದುಡಿದು ನಿವೃತ್ತರಾಗಿ ಮನೆಯಲ್ಲಿರುವ ಪತ್ರಿಕಾ ಪ್ರತಿನಿಧಿಗಳಿಗೆ ಅಥವಾ ಮರಣ ಹೊಂದಿದ ಪತ್ರಿಕಾ ಪ್ರತಿನಿಧಿಗಳ ಹೆಂಡತಿ–ಮಕ್ಕಳಿಗೆ ಮಾಶಾಸನವನ್ನು ಕೊಡಲು ಕ್ರಮ ಕೈಗೊಳ್ಳಲಾಗುವುದೆ? ಹಾಗೆಯೇ, ಕಲೆಗಾಗಿ ದುಡಿದು ಇಂದು ಬಡವರಾಗಿರುವ ಕಲಾವಿದರುಗಳಿಗೆ ಮಾಶಾಸನ ನೀಡಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾಶಾಸನ ಯೋಜನೆಯನ್ನು ಸರ್ಕಾರ ಮುಂದುವರಿಸುತ್ತದೆ. ಬಾಕಿ ಉಳಿದಿರುವ ಅರ್ಜಿಗಳನ್ನು ಪರಿಶೀಲನೆ ಮಾಡಿ, ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮಾಶಾಸನವನ್ನು ನೀಡಲು ಪ್ರಯತ್ನ ಮಾಡಲಾಗುವುದು. ಪತ್ರಿಕಾ ರಂಗದಲ್ಲಿ ಕೆಲಸ ಮಾಡಿರತಕ್ಕವರನ್ನೂ ಸಹ ಇದರಲ್ಲಿ ಪರಿಗಣನೆ ಮಾಡಲಾಗುವುದು.

3–30 P.M.

ಶ್ರೀ ವೈ. ರಾಮಕೃಷ್ಣ.—ರಾಜ್ಯದಲ್ಲಿ ಅಸ್ಪೃಶ್ಯತೆಯ ನಿವಾರಣೆಯ ಕಾರ್ಯಕ್ರಮದಲ್ಲಿ ತೊಡಗಿರತಕ್ಕ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಅಡ್ವರ್ಟೈಜ್ ಕೊಡುತ್ತೀರಾ? ಹಿಂದೆ ಪಾಂಚಜನ್ಯ ಮುಂತಾದ ಕೆಲವು ಪತ್ರಿಕೆಗಳನ್ನು. ಗ್ರಾಮ ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳಿಗೆ ಕಳುಹಿಸತಕ್ಕ ಒಂದು ಕಾರ್ಯಕ್ರಮ ಹಿಂದೆ ಜಾರಿಯಲ್ಲಿ ಇತ್ತು. ಅದರ ಕಾಸ್ಟ್ ಅನ್ನು ಸರ್ಕಾರದವರೇ ಕೊಡುತ್ತಿದ್ದರು. ಈ ಒಂದು ಸಲಹೆಯನ್ನು ಪರಿಶೀಲನೆ ಮಾಡುತ್ತೀರಾ? ಈ ಪತ್ರಿಕೆಗಳಗೆ ಸರ್ಕಾರದವರೇ ಸಂಪೂರ್ಣವಾಗಿ ಹಣವನ್ನು ಕೊಡತಕ್ಕ ಸಿಸ್ಟಂ ಅನ್ನು ಜಾರಿಗೆ ತರುತ್ತೀರಾ?

ಶ್ರೀ ಕೆ. ಎಚ್. ಶ್ರೀನಿವಾಸ್.—ಅದನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಜಿ. ಟಿ. ರಾಮು.—ಹಿಂದೆ ರಾಜಮಹಾರಾಜರುಗಳು ಕಲೆಗಾರರಿಗೆ ಆಶ್ರಯವನ್ನು ಕೊಡುತ್ತಿದ್ದರು. ಸಹಾಯ ಮಾಡುತ್ತಿದ್ದರು. ಈಗ ಪ್ರಜಾಪ್ರಭುತ್ವ ಇರುವಾಗ ಸರ್ಕಾರದವರೇ ಕಲೆಗಾರರಿಗೆ ಹೆಚ್ಚಿನ ಸಹಾಯವನ್ನು ಮಾಡಬೇಕು. ಈಗ ಅನೇಕ ಜನ ಕಲೆಗಾರರು ರಂಗಭೂಮಿಯಲ್ಲಿ ದುಡಿದವರು, ೫೦ ವರ್ಷಗಳಿಗೂ ಮೇಲ್ಪಟ್ಟವರು ಯಾವ ಸಹಾಯವೂ ಇಲ್ಲದೆ ಬೀದಿಯಲ್ಲಿ ಅಲೆದಾಡುತ್ತಿದ್ದಾರೆ. ಆದ್ದರಿಂದ ಅಶಕ್ತ ಕಲಾವಿದರುಗಳಿಗೆ ಮಾಸಾಸನ ಕೊಡತಕ್ಕ ಒಂದು ನೀತಿಯನ್ನು ಹಾಕಿಕೊಳ್ಳುವುದು ಒಳ್ಳೆಯದಲ್ಲವೇ?

ಎರಡನೆಯದಾಗಿ ಸಣ್ಣ ಪತ್ರಿಕೆಗಳನ್ನು ನಡೆಸತಕ್ಕವರನ್ನು ನೋಡಿದರೆ ಅಯ್ಯೋ ಪಾಪ ಎನಿಸುತ್ತದೆ. ಅವರ ಪತ್ರಿಕೆಗಳು ಹೆಚ್ಚು ಖರ್ಚಾಗುವುದಿಲ್ಲ. ಅವರು ಪೇಪರ್ ಪ್ರಿಂಟ್ ಮಾಡಿಸುವುದಕ್ಕೆ ಅವರ ಹತ್ತಿರ ಹಣವಿಲ್ಲ, ಆದ್ದರಿಂದ ಅವರಿಗೆ ಜಾಹಿರಾತಿಗೆ ಕೊಡತಕ್ಕ ಹಣವನ್ನು ಹೆಚ್ಚು ಮಾಡುತ್ತೀರಾ?

ಜೊತೆಗೆ ಚಲನ ಚಿತ್ರಗಳಿಗೆ ಸಬ್ಸಿಡಿ ಕೊಡುವಾಗ ಅವುಗಳ ಗುಣಮಟ್ಟವನ್ನು ನೋಡಿ ಸಬ್ಸಿಡಿ ಕೊಡತಕ್ಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ. ಎಚ್. ಶ್ರೀನಿವಾಸ್.—ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಮೈಕೇಲ್ ಫರ್ನ್ಯಾಂಡಿಜ್.—ಶ್ರೀ ಮರಿಸ್ವಾಮಿಯವರ ಮತ್ತು ಡಾ॥ ಅಂಬೇಡ್ಕರ್ ಅವರ ಮೆಮೋರಿಯಲ್ ಇಟ್ಟುಕೊಳ್ಳಬೇಕು ಎಂದು ಕೇಳಿದಾಗ ತಾವು ನೇರವಾಗಿ ಒಪ್ಪಿಕೊಂಡಿದ್ದೀರಿ, ಅದನ್ನು ಗುಲ್ಬರ್ಗಾದಲ್ಲಿ, ಬಿಜಾಪುರದಲ್ಲಿ ಇಟ್ಟುಕೊಳ್ಳುತ್ತೇವೆ ಎಂದು ಹೇಳಿದ್ದೀರಿ, ಅದಕ್ಕಾಗಿ ನಾನು ಕೇಳುವುದು ಏನೆಂದರೆ ಆ ಮೆಮೋರಿಯಲ್ ಅನ್ನು ಮಳವಳ್ಳಿಯಲ್ಲಿ ಇಟ್ಟುಕೊಳ್ಳಬಹುದು ಅಲ್ಲವೇ?

ಶ್ರೀ ಕೆ. ಎಚ್. ಶ್ರೀನಿವಾಸ್.—ಬಿಜಾಪುರದಲ್ಲಿ ಸಾಕಷ್ಟು ಹರಿಜನರ ಸಂಖ್ಯೆ ಇರುವುದರಿಂದ ಅಲ್ಲಿ ಇದನ್ನು ಮಾಡೋಣ ಎಂದು ಯೋಚನೆ ಮಾಡಿದ್ದೇವೆ.

ಶ್ರೀ ಜಿ. ಕೆ. ತಕ್ಕೇದ.—ಸೌದತ್ತಿ, ಮಲಪ್ರಭಾ ಘಟಪ್ರಭಾ ನೀರಾವರಿ ಯೋಜನೆ ಮಹಾಕಾರ್ಯ ವನ್ನು ಸರ್ಕಾರ ಮಾಡಿದ್ದಾರೆ. ಕಿತ್ತೂರು ಕೋಟೆ, ಹಿಡಕಲ್ ಡ್ಯಾಮ್ ಇವುಗಳ ಸಾಕ್ಷ್ಯ ಚಿತ್ರವನ್ನು ಸೌದತ್ತಿಯ ಇತಿಹಾಸದ ಸಾಕ್ಷ್ಯ ಚಿತ್ರವನ್ನು ತೆಗೆಯುವ ಯೋಚನೆ ಸರ್ಕಾರಕ್ಕೆ ಇದೆಯೇ? ದೊಡ್ಡ ದೊಡ್ಡ ಸಾಹಿತಿಗಳು, ಜನಪದ ಸಾಹಿತಿಗಳಿಗೆ ಕಲೆಗಾರರಿಗೆ ಏನಾದರೂ ಮಾಸಾಶನ ಕೊಡತಕ್ಕ ವಿಚಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆಯೇ? ಹಾಗೆಯೇ ಕುಸ್ತಿ ಮಾಡತಕ್ಕವರು ಸಾಕಷ್ಟು ಕುಸ್ತಿಗಳನ್ನು ಮಾಡಿ ಮುದುಕರಾಗಿದ್ದಾರೆ. ಅವರಿಗೆ ಜೀವನಕ್ಕೆ ತೊಂದರೆಯಾಗಿದೆ. ಅಂಥವರಿಗೆ ಏನಾದರೂ ಮಾಸಾಶನ ಕೊಡತಕ್ಕ ವಿಚಾರವನ್ನು ಸರ್ಕಾರ ಇಟ್ಟುಕೊಂಡಿದೆಯೇ? ಹಾಗೆಯೇ ಗರಡಿ ಮನೆಗಳಿಗೂ ಏನಾದರೂ ಹಣ ಸಹಾಯ ಮಾಡುತ್ತೀರಾ?

ಶ್ರೀ ಕೆ. ಎಚ್ ಶ್ರೀನಿವಾಸ್.—ಘಟಪ್ರಭಾ ಮಲಪ್ರಭಾ ಯೋಜನೆಗಳ ಬಗ್ಗೆ ಈಗಾಗಲೇ ಸಾಕ್ಷ್ಯ ಚಿತ್ರಗಳನ್ನು ತಯಾರು ಮಾಡಿದ್ದೇವೆ. ಕುಸ್ತಿ ಕ್ರೀಡೆ ಇವುಗಳ ಬಗ್ಗೆಯೂ ಹೇಳಿದ್ದೇನೆ. ನಾವು ಯಾವ ಯಾವ ಸಾಕ್ಷ್ಯ ಚಿತ್ರಗಳನ್ನು ತಯಾರು ಮಾಡಿದ್ದೇವೆ ಎನ್ನುವ ವಿಚಾರವನ್ನು ನಾನು ನಾನು ಈಗಾಗಲೇ ಹೇಳಿದ್ದೇನೆ. ಪ್ರಾಯಶಃ ಈಗ ಮಾನ್ಯ ಸದಸ್ಯರು ಇಲ್ಲಿ ಇರಲಿಲ್ಲ ಎಂದು ಕಾಣುತ್ತದೆ. ಆದ್ದರಿಂದ ಆ ಬಗ್ಗೆ ಮತ್ತೆ ಹೇಳುವ ಅಗತ್ಯವಿಲ್ಲ.

MR. SPEAKER—The question is :

"That a sum not exceeding Rs. 3,88,59,000 inclusive of the sum granted 'on account' be granted to the Government to defray the charges which will come in course of payment during the financial year ending 31st March 1979 in respect of Demand No. 11, 'Youth Services and Academies".

The motion was adopted and the demand was granted

MR. SPEAKER—The question is : "That a sum not exceeding Rs. 1,84,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demand No. 25, 'Information and Publicity'."

The motion was adopted and the demand was granted.

(Demand Nos. 27 and 28)

MR. SPEAKER—We shall now take up the next Demands viz. Demands Nos. 27 and 28.